Language and Literacy

TESS India

# Knowing and using children’s literature

# ಮಕ್ಕಳ ಸಾಹಿತ್ಯ ತಿಳಿಯುವುದು ಮತ್ತು ಬಳಸುವುದು





Teacher Education through School-based Support in India
www.TESS-India.edu.in


http://creativecommons.org/licenses/

The Open University

UKaid from the British people

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF 2005) ಮತ್ತು ಶಿಕ್ಷಕರ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2009)ಗಳು ಭಾರತದಲ್ಲಿನ ಶಿಕ್ಷಣಕ್ಕಾಗಿ ಮಹಾದಾಸೆಯ ದೃಷ್ಟಿಕೋನವನ್ನು ನೀಡಿವೆ. ಇದರಲ್ಲಿ ಎಲ್ಲಾ ಶಾಲೆಗಳು ಸದೃಢವಾದ ಕಲಿಕಾ ವಾತಾವರಣವನ್ನು ಒದಗಿಸುತ್ತವೆ. ಈ ದೃಷ್ಟಿ ಕೋನವನ್ನು ಸಾಕಾರಗೊಳಿಸಲು ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ ಸಹಾಯ ಹಸ್ತ ನೀಡುವುದೇ ಟೆಸ್ ಇಂಡಿಯಾ -OERನ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶವನ್ನು ಈಡೇರಿಸಲು ಶಿಕ್ಷಕರನ್ನು ಗಳೆಂದು ಪರಿಗಣಿಸಿ ಅವರು ತಮ್ಮ ವೃತ್ತಿಯಲ್ಲಿ ಅವಶ್ಯಕವಿರುವ ಸಾಧನ ಹಾಗೂ ವಿಧಾನಗಳನ್ನು 'ವಿದ್ಯಾರ್ಥಿ' ಬೆಳೆಸಿಕೊಳ್ಳುವಲ್ಲಿ ನೈಪುಣ್ಯತೆಯನ್ನು ಹೊಂದುವಂತೆ, ಬೋಧನೆಯ ಮತ್ತು ಕಲಿಕೆಯ ವಿಧಾನಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಹಾಯವಾಗುವಂತೆ ಸಂಪನ್ಮೂಲ ರಚಿಸಲಾಗಿದೆ. OER ಮುಖ್ಯ ಲಕ್ಷಣವೆಂದರೆ ಶಿಕ್ಷಕರು ಘಟಕಗಳನ್ನು, ವೈಯಕ್ತಿಕ ಚಟುವಟಿಕೆಗಳನ್ನು, ಕೇಸ್ ಸ್ಟಡಿಗಳನ್ನು ಬಳಸಿ, ಅವರ ವೃತ್ತಿ ಕೌಶಲ್ಯವನ್ನು ವೃದ್ಧಿಸಿಕೊಂಡು ಅವುಗಳನ್ನು ನೂತನ ಸಂದರ್ಭಗಳಿಗೆ ಮತ್ತು ವಿಷಯಗಳಿಗೆ ಅನ್ವಯಿಸುವುದು.

ಎಲ್ಲಾ ವಿಷಯಗಳಿಗೂ ಹಾಗೂ ಎಲ್ಲಾ ಹಂತಗಳಿಗೂ ಅನ್ವಯವಾಗುವ ಈ ಪ್ರಮುಖ ಸಂಪನ್ಮೂಲಗಳು, ಭಾರತದ ಶಿಕ್ಷಣ ನೀತಿ ಮತ್ತು ಟೆಸ್ ಇಂಡಿಯಾ OERನಲ್ಲಿನ ಮಾದರಿಯಂತೆ ಶಿಕ್ಷಕರಿಗೆ ಶೈಕ್ಷಣಿಕ ಕ್ಷೇತ್ರದಲ್ಲಿನ ಪ್ರಮುಖ ವಿಧಾನಗಳ ಬಗ್ಗೆ ಮುಂದುವರಿದ ಪ್ರಾಯೋಗಿಕ ಸಲಹೆಗಳನ್ನು ನೀಡುತ್ತವೆ. ಟೆಸ್ ಇಂಡಿಯಾದ ಪ್ರಾಯೋಗಿಕ ತತ್ವಗಳನ್ನೊಳಗೊಂಡಂತೆ ವಿದ್ಯಾರ್ಥಿಗಳನ್ನು ಸಂಘಟಿಸುವ ವಿಧಾನಗಳು, ಕಲಿಕಾ ಚಟುವಟಿಕೆಗಳು ಮತ್ತು ಶಿಕ್ಷಕ-ವಿದ್ಯಾರ್ಥಿ ಮತ್ತು ವಿದ್ಯಾರ್ಥಿ - ವಿದ್ಯಾರ್ಥಿಗಳ ನಡುವಿನ ಒಡನಾಟವನ್ನು ಏರ್ಪಡಿಸುವ ವಿಧಾನಗಳನ್ನು ಒಳಗೊಂಡಿದೆ. ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ ವೆಬ್‌ಸೈಟ್ ನಲ್ಲಿ ಈ ಪ್ರಮುಖ ಸಂಪನ್ಮೂಲಗಳು ಲಭ್ಯವಿದೆ.

**ವೀಡಿಯೋ ಸಂಪನ್ಮೂಲಗಳು** 

ಟೆಸ್ ಇಂಡಿಯಾದವರು ತಯಾರಿಸಿದ ವೀಡಿಯೋ ಕ್ಲಿಪ್‌ಗಳ ಸಮೂಹವು ತರಗತಿಯಲ್ಲಿನ ಭಾಗವಹಿಸುವಿಕೆಯ ಪ್ರಮುಖ ತಂತ್ರಗಳನ್ನು ವಿವರಿಸುತ್ತವೆ. (ಪ್ರಮುಖ ಸಂಪನ್ಮೂಲಗಳ ವಿಷಯಗಳಿಗೆ ಸರಿಹೊಂದುವಂತೆ) ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸುವಿಕೆಯ ಅಭ್ಯಾಸಗಳನ್ನು ಭಾರತೀಯ ತರಗತಿಗಳಲ್ಲಿ ಬಳಸುವುದನ್ನು ಈ ಕ್ಲಿಪ್ ಗಳಲ್ಲಿ ನಾವು ಕಾಣಬಹುದಲ್ಲದೇ, ನಿರ್ದಿಷ್ಟ ಕ್ರಿಯೆಗಳನ್ನು ಹಾಗೂ ನಡತೆಗಳನ್ನು ವೀಕ್ಷಕರು ಗುರುತಿಸಲು ವೀಕ್ಷಕ ವಿವರಣೆಯನ್ನು ಕೇಳಬಹುದು. ಈ ವೀಡಿಯೋ ಕ್ಲಿಪ್‌ಗಳನ್ನು ಹಿಂದಿ ತರಗತಿಗಳಲ್ಲಿ ಚಿತ್ರೀಕರಿಸಿದ್ದು, ವಿವಿಧ ರಾಜ್ಯಗಳಿಗೆ ಅನುಗುಣವಾಗಿ ವೀಕ್ಷಕ ವಿವರಣೆಯನ್ನು ಭಾಷಾಂತರಿಸಲಾಗಿದೆ. ಈ ವೀಡಿಯೋ ಕ್ಲಿಪ್‌ಗಳಿಗೆ ಲಿಂಕ್‌ಗಳನ್ನು ವೀಡಿಯೋ ಚಿತ್ರದ ಮೂಲಕ OERಗಳಲ್ಲಿ ನಿರ್ದಿಷ್ಟ ಸ್ಥಳಗಳಲ್ಲಿ ತೋರಿಸಿದ್ದು, ಅಂತರ್ಜಾಲದ ಮೂಲಕ ಬಳಕೆದಾರರು ಇದನ್ನು ಬಳಸಬಹುದಾಗಿದೆ. ಈ ವೀಡಿಯೋ ಕ್ಲಿಪ್‌ಗಳನ್ನು ಟ್ಯಾಬ್ಲೆಟ್, ಪಿಸಿ, ಡಿ.ವಿ.ಡಿ, ಮೊಬೈಲ್ ಫೋನ್‌ಗಳಲ್ಲಿ ಹಾಗೂ ಎಸ್.ಡಿ ಕಾರ್ಡ್ ಮೂಲಕ ಬಳಸಲು ಬಳಕೆದಾರರು ಇವುಗಳನ್ನು ಡೌನ್‌ಲೋಡ್ ಮಾಡಬಹುದಾಗಿದೆ. (http://www.tess-india.edu.in/)

*Version 2.0 LL08TESSKNV1*
*Karnataka*

*Except for third party materials and otherwise stated, this content is made available under a Creative Commons Attribution-ShareAlike licence: http://creativecommons.org/licenses/by-sa/3.0/*

*TESS-India is led by The Open University UK and funded by UK aid from the UK government*

## ಈ ಘಟಕದಲ್ಲೇನಿದೆ?

ಭಾರತದಲ್ಲಿ ಸಮೃದ್ಧವಾದ ಮೌಖಿಕ ಹಾಗೂ ಲಿಖಿತ ಸಾಹಿತ್ಯ ಪರಂಪರೆ ಇದೆ. ಮಕ್ಕಳ ಕತೆ ಮತ್ತು ಪದ್ಯಗಳ ಕುರಿತಾದ ಜ್ಞಾನದಿಂದ ಮಕ್ಕಳು ಈ ಪರಂಪರೆಗೆ ಬೆಲೆ ಕೊಟ್ಟು ಆನಂದಿಸುವುದಕ್ಕೆ ನೀವು ಪ್ರೋತ್ಸಾಹ ನೀಡಬಹುದು. ಇದರಿಂದ ನಮ್ಮ ದೇಶದ ಭಾಷೆಗಳು, ಚರಿತ್ರೆ ಮತ್ತು ಸಂಸ್ಕೃತಿಯನ್ನು ವಿದ್ಯಾರ್ಥಿಗಳು ತಮ್ಮದಾಗಿಸಿಕೊಂಡು ಹಂಚಿಕೊಳ್ಳುವುದಕ್ಕೆ ಉತ್ತೇಜನ ಸಿಗುತ್ತದೆ.

ಈ ಘಟಕದಲ್ಲಿ ನೀವು:

- ಮಕ್ಕಳ ಸಾಹಿತ್ಯದ ಕುರಿತು ನಿಮಗಿರುವ ಜ್ಞಾನವನ್ನು ಪುನರಾವಲೋಕನ ಮಾಡಿಕೊಂಡು,ಜ್ಞಾನ ವಿಸ್ತರಣೆಗೆ ಕ್ರಮ ಕೈಗೊಳ್ಳುವಿರಿ
- ಮಕ್ಕಳ ಸಾಹಿತ್ಯದ ಗುಣಲಕ್ಷಣಗಳ ಕಡೆ ಗಮನ ಹರಿಸುವಿರಿ
- ನಿಮ್ಮ ವಿದ್ಯಾರ್ಥಿಗಳನ್ನು ಸಾಹಿತ್ಯಕ್ಕೆ ಪರಿಚಯಿಸಲು ತರಗತಿಯಲ್ಲಿ ಕೆಲವು ಸರಳ ಚಟುವಟಿಕೆಗಳನ್ನು ಅನುಷ್ಠಾನಕ್ಕೆ ತರುವಿರಿ

## ಈ ಘಟಕದಲ್ಲಿ ನೀವೇನು ಕಲಿಯಬಹುದು?

- ನಿಮ್ಮ ವಿದ್ಯಾರ್ಥಿಗಳಿಗೆ ಸೂಕ್ತವಾದ ಸಾಹಿತ್ಯದ ಪರಿಶೋಧನೆ ಮತ್ತು ಅದರ ಕುರಿತಾದ ಜ್ಞಾನವನ್ನು ವಿಸ್ತಾರ ಮಾಡಿಕೊಳ್ಳಬಹುದಾದ ರೀತಿ
- ಉತ್ತಮ ಗುಣಮಟ್ಟದ ಮಕ್ಕಳ ಸಾಹಿತ್ಯದ ಗುಣಲಕ್ಷಣಗಳನ್ನು ಗುರುತಿಸುವ ಬಗೆ
- ತರಗತಿಯಲ್ಲಿ ಕತೆ ಮತ್ತು ಕವಿತೆಗಳನ್ನು ಬಳಸುವ ತಂತ್ರಗಳು

## ಈ ಮಾರ್ಗವೇಕೆ ಮುಖ್ಯ?

ಮಕ್ಕಳ ಅನುಭವ ಪ್ರಪಂಚವನ್ನು ಮೀರಿ ಅದನ್ನು ವಿಸ್ತರಿಸಲು, ಅದೇ ಸಮಯದಲ್ಲಿ ಅವರಿಗೆ ಗ್ರಹಿಕೆ ಮತ್ತು ಉತ್ಪಾದನಾ ಭಾಷಾ ಕೌಶಲಗಳನ್ನು ಬೆಳೆಸಲು ಕಥೆ ಮತ್ತು ಪದ್ಯಗಳು ಅದ್ಭುತ ಸಂಪನ್ಮೂಲಗಳು. ಕಥೆ ಮತ್ತು ಕವನ ಕೇಳುವ ಪ್ರಾರಂಭಿಕ ಅನುಭವಗಳು ಧನಾತ್ಮಕವಾಗಿದ್ದಲ್ಲಿ ಮಕ್ಕಳಿಗೆ ತಾವಾಗಿಯೇ ಕತೆ ಕವನಗಳನ್ನು ಓದಲು ಆಶಯ ಮತ್ತು ಸ್ಫೂರ್ತಿ ಸಿಗುತ್ತದೆ, ಇದು ಅವರ ಸಾಕ್ಷರತಾ ಬೆಳವಣಿಗೆಗೆ ಅನುಕೂಲವಾಗುತ್ತದೆ. ನಿಮ್ಮ ವಿದ್ಯಾರ್ಥಿಗಳ ಭಾಷೆ ಮತ್ತು ಸಾಕ್ಷರತಾ ಕೌಶಲ ಅಭಿವೃದ್ಧಿ ಸಂತಸದಿಂದ ಸಾಗಲು ನಿಮಗೆ ಗೊತ್ತಿರುವ ಪಾರಂಪರಿಕ ಮತ್ತು ಆಧುನಿಕ ಕಥೆಗಳ ಬಳಕೆಯನ್ನು ಈ ಘಟಕ ಉತ್ತೇಜಿಸುತ್ತದೆ.

# 1 ಮಕ್ಕಳ ಸಾಹಿತ್ಯದ ಕುರಿತು ನಿಮಗಿರುವ ಜ್ಞಾನವನ್ನು ಪರಿಶೋಧಿಸಿಕೊಳ್ಳುವುದು ಮತ್ತು ವಿಸ್ತರಿಸಿಕೊಳ್ಳುವುದು

### ಮಕ್ಕಳ ಸಾಹಿತ್ಯದ ನಿಮ್ಮ ಜ್ಞಾನವನ್ನು ಪರಿಶೋಧಿಸಿಕೊಳ್ಳುವುದರಿಂದ ಪ್ರಾರಂಭಿಸಿರಿ

### ಚಟುವಟಿಕೆ 1: ಮಕ್ಕಳ ಸಾಹಿತ್ಯದ ಕುರಿತು ನಿಮಗಿರುವ ಜ್ಞಾನವನ್ನು ಪರಿಶೋಧಿಸಿಕೊಳ್ಳುವುದು

ನಿಮ್ಮ ವಿದ್ಯಾರ್ಥಿಗಳಿಗೆ ಬಹುಶಃ ನೀವೇ ಸಾಹಿತ್ಯದ ಮೂಲ ಆಕರವಾಗಿರುತ್ತೀರಿ. ಆದ್ದರಿಂದ ನಿಮ್ಮ ವಿದ್ಯಾರ್ಥಿಗಳ ವಯಸ್ಸು ಮತ್ತು ಮಟ್ಟಕ್ಕೆ ಸೂಕ್ತವಾಗುವಂತಹ ವೈವಿಧ್ಯಮಯ ಕಥೆ ಮತ್ತು ಕವನಗಳನ್ನು - ನೀವು ಪುಸ್ತಕಗಳಲ್ಲಿ ಓದಿದ್ದಾಗಿರಬಹುದು ಅಥವಾ ಜ್ಞಾಪಕದಲ್ಲಿರಬಹುದಾಗಿರಬಹುದು - ತಿಳಿದಿರುವುದು ಬಹಳ ಮುಖ್ಯ.

ಪರಿಶೋಧನೆ ಪರೀಕ್ಷೆಯಲ್ಲ. ಮಕ್ಕಳ ಸಾಹಿತ್ಯದ ಬಗ್ಗೆ ನಿಮಗಿರುವ ಜ್ಞಾನದ ಅರಿವು ಮೂಡಿಸುವುದು ಇದರ ಉದ್ದೇಶ. ಈ ಪ್ರಶ್ನೆಗಳಿಗೆ ಸಾಧ್ಯವಾದಷ್ಟೂ ಪ್ರಾಮಾಣಿಕವಾಗಿ ಉತ್ತರಿಸಿ. ಮನಸ್ಸಿನಲ್ಲಿ ಮೂಡುವ ಉದಾಹರಣೆಗಳ ಟಿಪ್ಪಣಿ ಮಾಡಿಕೊಳ್ಳಿ. ನಿಮ್ಮ ಸಹೋದ್ಯೋಗಿಗಳನ್ನು ಅವರ ಜ್ಞಾನದ ಪರಿಶೋಧಕ್ಕೆ ಹಚ್ಚಿ. ಕೊನೆಯಲ್ಲಿ ನಿಮ್ಮ ಹಾಗೂ ಅವರ ಉತ್ತರಗಳನ್ನು ಹೋಲಿಸಿಕೊಂಡು ನೋಡಬಹುದು.

ನೆನಪಿನಿಂದ ನೀವು:

- ಮಕ್ಕಳ ಪದ್ಯವೊಂದನ್ನು ಹೇಳಬಲ್ಲಿರಾ?
- ಮಕ್ಕಳು ಹಾಡುವ ಶಿಶುಗೀತೆಯೊಂದನ್ನು ಹಾಡಬಲ್ಲಿರಾ?

ನೆನಪಿನಿಂದ ನೀವು:

- ಜಾನಪದ ಕತೆಯೊಂದನ್ನು ಹೇಳಬಲ್ಲಿರಾ?
- ಒಂದು ಸಣ್ಣ ಚಾರಿತ್ರಕ ಘಟನೆಯೊಂದನ್ನು ನಿರೂಪಿಸಬಲ್ಲಿರಾ?

ನೀವು

- ಮಕ್ಕಳ ಕತೆ ಅಥವಾ ಜಾನಪದ ಕಥೆಯ ಪಾತ್ರವೊಂದನ್ನು ಹೆಸರಿಸಬಲ್ಲಿರಾ?
- ಪದ್ಯ ಅಥವಾ ಶಿಶುಗೀತೆಯ ಪಾತ್ರವೊಂದನ್ನು ಹೆಸರಿಸಬಲ್ಲಿರಾ?

ಕೆಳಗಿರುವುದಕ್ಕೆ ಒಂದು ಉದಾಹರಣೆ ಕೊಡಿ:

- ಮಕ್ಕಳ ಕಥೆ ಪುಸ್ತಕ
- ಮಕ್ಕಳ ಕವನಗಳ ಪುಸ್ತಕ
- ಕನ್ನಡದ ಮಕ್ಕಳ ಲೇಖಕರು
- ಕನ್ನಡದ ಮಕ್ಕಳ ಕವಿ

ನಿಮ್ಮ ಪರಿಶೋಧನೆ ಮತ್ತು ಆಲೋಚನೆಗಳನ್ನು ಸಾಧ್ಯವಾದರೆ ನಿಮ್ಮ ಸಹೋದ್ಯೋಗಿಯದರೊಂದಿಗೆ ಹೋಲಿಸಿಕೊಳ್ಳಿ'

**ಚಿಂತನೆಗೊಂದು ಕ್ಷಣ**

- ಮಕ್ಕಳ ಪದ್ಯ ಮತ್ತು ಕವನಗಳ ಕುರಿತಾದ ನಿಮ್ಮ ಮತ್ತು ನಿಮ್ಮ ಸಹೋದ್ಯೋಗಿಯ ಜ್ಞಾನದ ನಡುವೆ ಸಾಮ್ಯತೆ ಇತ್ತೆ ಅಥವಾ ಎರಡೂ ವಿಭಿನ್ನವಾಗಿದ್ದವೆ? ನೀವು ಹಂಚಿಕೊಳ್ಳಬಹುದಾದ ಜ್ಞಾನವಿದೆಯೇ?
- ನೀವು ಚಿಕ್ಕವರಾಗಿದ್ದಾಗ ಹೇಳಿದಂತ ಕಥೆ ಕವನಗಳನ್ನು ಇಂದೂ ಹೇಳಲಾಗುತ್ತಿದೆಯೇ?
- ಈ ಕಥೆ ಕವನಗಳನ್ನು ನಿಮ್ಮ ತರಗತಿಯಲ್ಲಿ ಬಳಸುತ್ತಿರುವಿರಾ? ಏಕೆ ಅಥವಾ ಏಕಿಲ್ಲ?

ನಿಮಗೆ ಬಹುಶಃ ನೀವು ಚಿಕ್ಕವರಾದಾಗ ಕೇಳಿದ ಕಥೆ ಮತ್ತು ಪದ್ಯಗಳು ನೆನಪಿಗೆ ಬಂದಿರುತ್ತದೆ. ಯಾವುದೋ ಜಾನಪದ ನೀತಿ ಪಾಠ ಅಥವಾ ವರ್ತನೆ ತಿದ್ದಲು ಹೇಳಿದ ಎಚ್ಚರಿಕೆ ಮಾತು ಅಥವಾ ಆಟದ ಮೈದಾನದಲ್ಲಿ ಹೇಳಿಕೊಂಡ ಹಾಡಿನ ನೆನಪುಗಳು ಮರುಕಳಿಸಿರಬಹುದು. ಈ ಕಥೆ ಅಥವಾ ಪದ್ಯಗಳು ಪುಸ್ತಕದಲ್ಲಿ ಓದಿರದ, ಮನೆ, ಸಮುದಾಯ ಅಥವಾ ಶಾಲೆಯಲ್ಲಿ ಕಲಿತ್ತದಾಗಿರಬಹುದು. ನಿಮಗೆ ಈ ರೀತಿಯ ಜಾನಪದ ಕತೆ ಆಪ್ತವಾಗಿದ್ದಂತೆಯೇ,ನಿಮ್ಮ ಸಹೋದ್ಯೋಗಿಗಳಿಗೆ ರಾಜರತ್ನಂರವರ, ಪಂಜೆ ಮಂಗೇಶರಾಯರ ಅಥವಾ ಅನುಪಮಾ ನಿರಂಜನರವರ ಕತೆಗಳು ನೆನಪಿಗೆ ಬಂದಿರಬಹುದು. ಈ ಕತೆಗಳನ್ನು ಈಗಿನ ಮಕ್ಕಳು ಓದುತ್ತಿರಬಹುದು ಅಥವಾ ಇಲ್ಲದಿರಬಹುದು. ಈಗಿನ ಮಕ್ಕಳಿಗೆ ಟೇವಿ, ಕಾಮಿಕ್ ಪುಸ್ತಕ ಅಥವಾ ಸುತ್ತಮುತ್ತ ದಂತಕತೆಯಾಗಿರುವವರ ಬಗ್ಗೆ ಆಸಕ್ತಿ ಮೂಡಿರಬಹುದು. ಇವೆಲ್ಲವನ್ನೂ - ಹೊಸದು ಮತ್ತು ಹಳೆಯದು- ತರಗತಿಯಲ್ಲಿ ಸಂಪನ್ಮೂಲಗಳಾಗಿ ಬಳಸಬಹುದು. ಆದ್ದರಿಂದ ಭಾಷಾ ಬೋಧನೆಗೆ ಈ ಎಲ್ಲ ಕತೆಗಳ ಭಂಡಾರವೊಂದನ್ನು ಇಟ್ಟುಕೊಂಡರೆ ಅನುಕೂಲ.

| **ಚಟುವಟಿಕೆ 2: ಮಕ್ಕಳ ಸಾಹಿತ್ಯದ ಜ್ಞಾನವನ್ನು ವಿಸ್ತರಿಸಿಕೊಳ್ಳುವುದು** |
| --- |
| ನಿಮ್ಮ ಪರಿಶೋಧನೆಯ ಮುಂದಿನ ಹೆಜ್ಜೆಗಳನ್ನು ಈಗ ಯೋಜಿಸಿಕೊಳ್ಳಿ. ನಿಮ್ಮ ಓದಿಗೆ ಕೆಲವು ನಿರ್ದಿಷ್ಟ ಗುರಿಗಳನ್ನು ನಿಗದಿಪಡಿಸಿಕೊಳ್ಳಿ.<br>• ನಿಮಗೆ ಹೊಸಬರಾದ ಇಬ್ಬರು ಬಾಲಸಾಹಿತಿಗಳ ಪದ್ಯಗಳನ್ನು ಓದುವುದು<br>• ನಿಮಗೆ ಹೊಸಬರಾದ ಇಬ್ಬರು ಮಕ್ಕಳ ಸಾಹಿತಿಯ ಗದ್ಯ ಓದುವುದು<br>ನಿಮ್ಮ ವಿಚಾರಗಳನ್ನು ನಿಮ್ಮ ಸಹೋದ್ಯೋಗಿಗಳೊಂದಿಗೆ ಹಂಚಿಕೊಳ್ಳಿ. |

## 2 ತರಗತಿಯ ಬಳಕೆಗೆ ಸಾಹಿತ್ಯದ ಆಯ್ಕೆ

ಕೆಳಗಿನ ಪ್ರಸಂಗ ಅಧ್ಯಯನದಲ್ಲಿ ಪುಸ್ತಕ ಜಾತ್ರೆಗೆ ಹೋದ ಶಿಕ್ಷಕಿಯೊಬ್ಬರು ಅಲ್ಲಿ ತಮಗೆ ದೊರಕಿದ್ದನ್ನು ತಮ್ಮ ಭಾಷೆ ಮತ್ತು ಸಾಕ್ಷರತೆಯ ತರಗತಿಯಲ್ಲಿ ಅಳವಡಿಸಿಕೊಳ್ಳವುದರ ಕುರಿತು ಚಿಂತಿಸುತ್ತಾರೆ.

### ಪ್ರಸಂಗ ಅಧ್ಯಯನ 1: ಅಪರ್ಣಾರವರು ತಮ್ಮ ವಿದ್ಯಾರ್ಥಿಗಳೊಡನೆ ಉಪಯೋಗಿಸಬಹುದಾದ ಭಾರತೀಯ ಮಕ್ಕಳ ಸಾಹಿತ್ಯಕ್ಕಾಗಿ ನಡೆಸಿದ ಹುಡುಕಾಟ

*ಅಪರ್ಣ ಬೆಂಗಳೂರಿನ 6ನೇ ತರಗತಿಯ ಶಿಕ್ಷಕಿ*

ನನ್ನ ಕ್ಲಾಸಿನೊಳಗೆ ಹೊಸ ಪುಸ್ತಕಗಳನ್ನು ತರಬೇಕೆಂದು ನನ್ನ ಬಯಕೆಯಾಗಿತ್ತು. ಇದಕ್ಕಾಗಿ ನಮ್ಮ ಮುಖ್ಯೋಪಾಧ್ಯಾನಿಯವರಾದ ಮಿಸ್ ಗೋಮ್ಸ್ ರವರ ಅನುಮತಿ ಸಿಗಬೇಕಿತ್ತು. ಅವರನ್ನು ಕೇಳಿದಕ್ಕೆ ಅವರು ಪುಸ್ತಕ್ಕಾಗಿ ಮೀಸಲಾದ ಶಾಲಾ ಬಜೆಟ್ ನ ಹಣವನ್ನು ನಾನು ಉಪಯೋಗಿಸಬಹುದೆಂದು ಮತ್ತು ಈ ಪುಸ್ತಕಗಳು ಶಾಲೆಯಲ್ಲಿ ಎಲ್ಲರಿಗೂ ಲಭ್ಯವಾಗುವುದೆಂದೂ ಹೇಳಿದರು

ಆಸಕ್ತಿ ಹುಟ್ಟಿಸಬಲ್ಲ ಪುಸ್ತಕಗಳನ್ನು ಹುಡುಕಿಕೊಂಡು ನಾನು ಬೆಂಗಳೂರಿನಲ್ಲಿ ನಡೆಯುತ್ತಿದ್ದ ಪುಸ್ತಕ ಜಾತ್ರೆ ಗೆ ಹೋದೆ. ಅಲ್ಲಿದ್ದ ಕಾಮಿಕ್ ಪುಸ್ತಕಗಳಿಂದ ಹಿಡಿದು ಉದ್ದುದ್ದ ಮಕ್ಕಳ ಕಾದಂಬರಗಳವರೆಗಿನ ಓದಿನ ಸಾಮಗ್ರಿಗಳ ಹರವು ನೋಡಿ ನನಗೆ ಆಶ್ಚರ್ಯವೋ ಆಶ್ಚರ್ಯ. ಅಲ್ಲಿದ್ದ ಪುಸ್ತಕಗಳಲ್ಲಿ ಮುಕ್ಕಾಲು ಮೂರು ಪಾಲು ಹೊರದೇಶದ್ದಾಗಿದ್ದವು. ಅಲ್ಲಿದ್ದ *'Grimm's Fairy Tales' ನ ವಿವಿಧ ಆವೃತ್ತಿಗಳ ನಡುವೆ ಭಾರತೀಯ ಕಥೆಗಳಿಗಾಗಿ ದೊಡ್ಡ ಹುಡುಕಾಟವನ್ನೇ ನಡೆಸಬೇಕಾಯಿತು. ದೊಡ್ಡ ಪ್ರಕಾಶನ ಸಂಸ್ಥೆಗಳೆಲ್ಲ ಇಂಗ್ಲೀಷ್ ಮಾಧ್ಯಮದ ಶಾಲೆಯ ಪೋಷಕರನ್ನೇ ಗುರಿಯಾಗಿಸಿಕೊಂಡಿದ್ದಾರೆ ಅನ್ನಿಸಿತು. ಕೊನೆಗೆ ನನ್ನ ತರಗತಿಗಳಿಗೆ ಸೂಕ್ತವಾದ ಆಸಕ್ತಿಕರ ಸಾಹಿತ್ಯದ ಪ್ರಕಾಶನ ಸಂಸ್ಥೆಯ ಒಂದು ಅಂಗಡಿ ಸಿಕ್ಕಿತು.*

ಮಕ್ಕಳ ಸಂತೋಷಕ್ಕಾಗಿ ಪುಸ್ತಕಗಳನ್ನು ಗಟ್ಟಿಯಾಗಿ ಓದುವುದರಿಂದ ಪ್ರಾರಂಭಿಸಿದೆ. ಅವರಿಗೆ ಕಥೆಗಳೆಲ್ಲ ಸ್ವಲ್ಪ ಪರಿಚಿತವಾದ ನಂತರ ಸಾಕ್ಷರತೆ ಬೆಳವಣಿಗೆ ಚಟುವಟಿಕೆಗಳನ್ನು ಯೋಜಿಸಲು ಪ್ರಾರಂಭಿಸಿದೆ. ಕಥೆ ಅಥವಾ ಪದ್ಯದ ಗುಣಮಟ್ಟ ಹೆಚ್ಚಿದಷ್ಟೂ ಅದರ ಸುತ್ತ ಚಟುವಟಿಕೆಗಳನ್ನು ಹೆಣೆಯುವುದು ಸುಲಭ.

**ಚಿಂತನೆಗೊಂದು ಕ್ಷಣ**

- ಕನ್ನಡದಲ್ಲಿ ಒಳ್ಳೆಯ ಮಕ್ಕಳ ಸಾಹಿತ್ಯ ಸುಲಭವಾಗಿ ದೊರಕುವುದಿಲ್ಲ ಎನ್ನುವ ಅಪರ್ಣಾರವರ ಅಭಿಪ್ರಾಯಕ್ಕೆ ನಿಮ ಸಹಮತವಿದೆಯೆ?
- ನಿಮ್ಮ ಶಾಲೆಯಲ್ಲಿ ಪುಸ್ತಕ ಕೊಳ್ಳಲು ಯಾವ ರೀತಿಯ ದೇಣಿಗೆ ಇದೆ? ಈ ಹಣದ ಅತ್ಯುತ್ತಮ ಬಳಕೆಯನ್ನು ನೀವು ಹೇಗೆ ಮಾಡಬಹುದು?

ಮುಂದ್ಧನ ಚಟ್ುವಟಿೆಯಲ್ಲ, ಉತ್ತಮ ಗುಣಮಟ್ಟದ ಮಕ್ಕ್ ಳ ಸ್ಲಾತ್ಯದ ಗುಣಲಕ್ಸಣಗಳನ್ನು ಸೂಕ್ಸ್ಮವಾ ಗಮನಿಸುವಿರಿ.

## ಚಟುವಟಿಕೆ 3: ಮಕ್ಕಳ ಸಾಹಿತ್ಯದ ಮೌಲ್ಯಮಾಪನ

ಮಕ್ಕಳ ಸಾಹಿತ್ಯದ ಹರಹು ದೊಡ್ಡದಾಗಿದೆ. ಈಗ ನೀವು ಎರಡು ಉದಾಹರಣೆಗಳತ್ತ ಗಮನ ಹರಿಸುವಿರಿ: ವಾರ್ಷಿಕ ಕೂದಲು ಕತ್ತರಿಸುವ ದಿನ (ಸಂಪನ್ಮೂಲ 1) ಎನ್ನುವ ಪುಸ್ತಕ ಮತ್ತು 'ಹಾವನ್ನು ಮದುವೆಯಾದ ಹುಡುಗಿ' ಎನ್ನುವ ಕಥೆ (ಸಂಪನ್ಮೂಲ 2).

ಎರಡೂ ಪಠ್ಯವನ್ನು ನಿಮಗೆ ನೀವೇ ಅಥವಾ ನಿಮ್ಮ ಸಹೋದ್ಯೋಗಿಗೆ ಗಟ್ಟಿಯಾಗಿ ಓದಿ. ಓದುತ್ತಿರುವಾಗ ಕೆಳಗಿನ ಪ್ರಶ್ನೆಗಳ ಕುರಿತು ಎಚ್ಚರಿಕೆಯಿಂದ ಚಿಂತಿಸಿ.

- ಎರಡು ಕಥೆಗಳ ನಡುವೆ ಇರುವ ವ್ಯತ್ಯಾಸಗಳೇನು?
- ನಿಮಗೆ ಎರಡರಲ್ಲಿ ಒಂದು ಹೆಚ್ಚು ಇಷ್ಟವಾಯಿತೇ?
- ನಿಮ್ಮ ದೃಷ್ಟಿಯಲ್ಲಿ,ಇವೆರಡರಲ್ಲಿ ಪ್ರತಿಯೊಂದರ ಧನಾತ್ಮಕ ಅಂಶಗಳು ಯಾವುವು?

*ವಾರ್ಷಿಕ ಕೂದಲು ಕತ್ತರಿಸುವ ದಿನ* ವನ್ನು ಮತ್ತೊಮ್ಮೆ ನೋಡಿ, ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ:

- ಬೇರೆ ಅನೇಕ ಕಥೆಗಳು ಪ್ರಾರಂಭವಾಗುವಂತೆ 'ಹಿಂದೆ ಒಂದೂರಲ್ಲಿ……" ಅಥವಾ "ಒಂದಾನೊಂದು ಕಾಲದಲ್ಲಿ……………", ಅಂತ ಏಕೆ ಈ ಕಥೆ ಪ್ರಾರಂಭವಾಗುತ್ತಿಲ್ಲ?
- ಇಲ್ಲಿ ಚಿತ್ರಗಳ ಅಗತ್ಯವಿದೆಯೇ? ಏಕೆ ಅಥವಾ ಏಕಿಲ್ಲ?
- ನಿಮ್ಮ ಅಭಿಪ್ರಾಯದಲ್ಲಿ ನಿಮ್ಮ ವಿದ್ಯಾರ್ಥಿಗಳಿಗೆ ಈ ಕಥೆಯಲ್ಲಿ ಯಾವ ಅಂಶಗಳು ಇಷ್ಟವಾಗುತ್ತವೆ?

ನಿಮ್ಮ ವಿಚಾರಗಳನ್ನು ನಮ್ಮದರೊಂದಿಗೆ ಹೋಲಿಸಿಕೊಳ್ಳಿ.

*ವಾರ್ಷಿಕ ಕೂದಲು ಕತ್ತರಿಸುವ ದಿನ* ಒಂದು ಚಿಕ್ಕ, ಉಲ್ಲಾಸಕರ ಪುಸ್ತಕ. ಚಿತ್ರಗಳು ಇಂದಿನ ಜೀವನಕ್ಕೆ ಸರಿ ಹೊಂದುವಂತೆ ಮತ್ತು ಮಕ್ಕಳಿಗೆ ಆಪ್ತವಾಗಿರುವಂತಿದೆ. ಇದರಲ್ಲಿರುವ ಅನೇಕ ಚಿತ್ರಗಳು, ಉದಾಹರಣೆಗೆ, ಕ್ಷೌರಿಕನ ಅಂಗಡಿಯ ಮತ್ತು ತಮ್ಮ ಕೆಲಸದಲ್ಲಿ ನಿರತರಾಗಿರುವ ಜನರಿರುವ ಮನೆಯ ಚಿತ್ರಗಳನ್ನು ನೋಡಿ ಮಾತನಾಡಿಕೊಳ್ಳಲು ಸಾಧ್ಯವಾಗುವಂತಹ ವಿಸ್ಮಯಕಾರೀ ವಿವರಗಳಿವೆ.

ಪಠ್ಯ, ಸರಳವಾಗಿದೆ ಹಾಗೂ ಪುನರುಕ್ತಿಯಾಗುತ್ತಿದೆ ಅಂತ ಅನ್ನಿಸಿದರೂ, ಸಂಕೀರ್ಣ ಭಾಷಾ ರಚನಾ-ಕ್ರಮವನ್ನು ಇದು ಮಾದರಿ ಮಾಡುತ್ತಿದೆ:

**ದುಃಖಿತನಾಗಿ,** ಶೃಂಗೇರಿ ಶ್ರೀನಿವಾಸ ಮನೆಗೆ ತಿರುಗಿ ಹೋದನು…..

**ಕೋಪ ಮಾಡಿಕೊಂಡು**, ಶೃಂಗೇರಿ ಶ್ರೀನಿವಾಸ ಸ್ನೇಹಿತನ ಬಳಿ ಹೋದನು…

**ಮತ್ತೆ ಸ್ವಲ್ಪ ಚಿಂತೆ ಮಾಡಿಕೊಂಡು**, ಶೃಂಗೇರಿ ಶ್ರೀನಿವಾಸ ಮತ್ತೊಬ್ಬ ಸ್ನೇಹಿತನ ಬಳಿ ಹೋದನು…

**ಕಣ್ಣೀರು** ಸುರಿಸುತ್ತಾ ಹೊರಟುಹೋದನು…..

*ವಾರ್ಷಿಕ ಕೂದಲು ಕತ್ತರಿಸುವ ದಿನ* ದಂತಹ ಪುಸ್ತಕಗಳು ಹೊಸ ಓದುಗರು ತಮ್ಮಷ್ಟಕ್ಕೇ ತಾವೇ ಸ್ವತಂತ್ರವಾಗಿ ಓದಲು ಸಹಾಯ ಮಾಡುವಂತೆ ರಚನೆಯಾಗಿರುತ್ತವೆ. ಇವುಗಳಲ್ಲಿ ಎಚ್ಚರಿಕೆಯಿಂದ ಆಯ್ಕೆ ಮಾಡಿದ ಪದಗಳು ಮತ್ತು ವಾಕ್ಯಾಂಶಗಳಿರುತ್ತವೆ. ಪಠ್ಯವನ್ನು ಅರ್ಥೈಸಿಕೊಳ್ಳಲು ವಿದ್ಯಾರ್ಥಿಗಳಿಗೆ ಚಿತ್ರಗಳಿಂದ ಸುಳಿವು ಸಿಗುತ್ತದೆ.

ವಿದ್ಯಾರ್ಥಿಗಳು ಈ ರೀತಿಯ ಕಥೆಗಳನ್ನು ಕೇಳಿ ಅಥವಾ ಓದುವುದರಿಂದ, ಇವೇ ಪದಗಳು ಮತ್ತು ವಾಕ್ಯಾಂಶಗಳು ಬೇರೆ ಪುಸ್ತಕದಲ್ಲಿದ್ದರೂ ಅವನ್ನು ಗುರುತಿಸುತ್ತಾರೆ ಮತ್ತು ಈ ಜ್ಞಾನವನ್ನು ಅವರದೇ ಮಾತು ಮತ್ತು ಬರವಣಿಗೆಯಲ್ಲಿ ಅನ್ವಯಿಸಿಕೊಳ್ಳುತ್ತಾರೆ.

ಚಿತ್ರ ಮತ್ತು ಕಥೆಯಲ್ಲಿ ನಡೆಯುತ್ತಿರುವ ಘಟನೆಗಳ ಕುರಿತಾದ ಪ್ರಶ್ನೆಗಳನ್ನು ಕೇಳಿ, ಮಕ್ಕಳ ಆಲಿಸುವಿಕೆ ಮತ್ತು ಮಾತನ್ನು ಪ್ರೋತ್ಸಾಹಿಸಲು ಸಹ ಈ ರೀತಿಯ ಪುಸ್ತಕಗಳನ್ನು ಬಳಸಬಹುದು.

ಇಂತಹ ಕಥೆಗಳು ಮಗು-ಸ್ನೇಹಿ ಎಂದು ಕರೆಯಬಹುದು. ಏಕೆಂದರೆ ಇದರಲ್ಲಿ ಇರುವ ಪ್ರಪಂಚವನ್ನು ಪುಟ್ಟ ಓದುಗರು ಗುರುತಿಸಲು ಸಾಧ್ಯ. ಈ ರೀತಿಯ ಕಥೆಗಳನ್ನು ಕೇಳಿ ಮತ್ತು ಓದಿದಾಗ ತಮಗೆ ಸಿಗುವ ತೃಪ್ತಿ ಮತ್ತು ಸಂತೋಷ, ಅವರು ಇತರ ಪುಸ್ತಕಗಳನ್ನು ಓದಲು ಸ್ಫೂರ್ತಿಯಾಗುತ್ತದೆ.

ಈ ತರನಾದ ಪುಸ್ತಕ ಓದಿದ ನಂತರ ಮಕ್ಕಳಿಗೆ ಕೆಳಗಿನವನ್ನು ಮಾಡಲು ಸಲಹೆ ನೀಡಬಹುದು:

- ಕಥೆಯ ವಿಸ್ತರಣೆ (ಉದಾಹರಣೆಗೆ ಹೊಸ ಪಾತ್ರಗಳನ್ನು ಅಥವಾ ಪ್ರಾಣಿಗಳನ್ನು ಸೇರಿಸಿಕೊಳ್ಳಬಹುದು)
- ಬೇರೆ ಅಂತ್ಯಗಳನ್ನು ಸೃಷ್ಟಿಸುವುದು (ಶೃಂಗೇರಿ ಶ್ರೀನಿವಾಸನ ಕೂದಲು ಉದುರಿದ ನಂತರ ಅವನ ತಲೆಗೆ ಥಂಡಿಯಾಗುವುದರಿಂದ ಅವನು ಟೋಫನ್ ಹಾಕಿಕೊಳ್ಳುವಂತೆ ಮಾಡಬಹುದು)
- ಅಭಿನಯಿಸಬಹುದು
- ಈ ಕಥೆಯನ್ನು, ಅವರಿಗೆ ಬೇಕಾದಂತೆ ರೂಪಾಂತರಿಸಿ ಹೇಳುವುದು/ಬರೆಯುವುದು
- ಇದೇ ರೀತಿಯ ಇನ್ನೊಂದು ಕಥೆಯನ್ನು ಕಟ್ಟುವುದು (ಉದಾಹರಣೆಗೆ, ಮೊಸಳೆಯ ವಾರ್ಷಿಕ ಹಲ್ಲುಜ್ಜುವ ದಿನ; ಇದಕ್ಕೆ ಅವರು 'ಇವತ್ತು ನನಗೆ ಇಷ್ಟೊಂದು ಹಲ್ಲುಗಳನ್ನು ಉಜ್ಜಲು ಸಮಯವಿಲ್ಲ' ಎನ್ನುವ ವಾಕ್ಯವನ್ನು ಪದೇ ಪದೇ ಬಳಸಬಹುದು).

ಈಗ ಸಂಪನ್ಮೂಲ 2 'ಹಾವನ್ನು ಮದುವೆಯಾದ ಹುಡುಗಿ' ಓದಿ.

- ಈ ಕಥೆಗೂ *ವಾರ್ಷಿಕ ಕೂದಲು ಕತ್ತರಿಸುವ ದಿನ* ಕ್ಕೂ ಇರುವ ವ್ಯತ್ಯಾಸಗಳೇನು?
- ಈ ಕಥೆಗೆ ಏಕೆ ಚಿತ್ರಗಳ ಆವಶ್ಯಕತೆ ಇಲ್ಲ?
- ಈ ಕಥೆಯನ್ನು ನೆನಪಿನಿಂದಲೇ ನಿಮ್ಮ ವಿದ್ಯಾರ್ಥಿಗಳಿಗೆ ಹೇಳಬಲ್ಲಿರಾ?
- ಈ ಕಥೆಯಲ್ಲಿ ಎಲ್ಲಿಯಾದರೂ ಕ್ಲಿಷ್ಟ ಪದಗಳಿಗೆ ಬದಲಾಗಿ ಸರಳ ಪದಗಳನ್ನು ಬಳಸಬಹುದೇ?
- ಈ ಕಥೆಯನ್ನು ಹಾಡುಗಳು, ಆಭಿನಯ, ಮಾತುಗಳು ಅಥವಾ ಇನ್ನೂ ಕೆಲವು ಪಾತ್ರಗಳನ್ನು ಸೇರಿಸಿ ವಿಸ್ತರಿಸಲು ಸಾಧ್ಯವೇ?
- ಈ ಕಥೆಯನ್ನು ಅಭಿನಯಿಸಲು ನಿಮ್ಮ ವಿದ್ಯಾರ್ಥಿಗಳು ಉತ್ಸುಕರಾಗಿರುವರೇ?

ಹಾವನ್ನು ಮದುವೆಯಾದ ಹುಡುಗಿ ಪಾರಂಪರಿಕ ಪಂಚತಂತ್ರದ ಕಥೆ. ಇದು ಪ್ರಾರಂಭವಾಗುವುದೇ, 'ಒಂದಾನೊಂದು ಕಾಲದಲ್ಲಿ .....' ಎಂದು. ಎಲ್ಲ ಪಾರಂಪರಿಕ ಕಥೆಗಳು ಪ್ರಾರಂಭವಾಗುವುದೇ ಹೀಗೆ ಮತ್ತು ಇದು ಒಂದು ರೀತಿಯಲ್ಲಿ ಕಥೆ ಪ್ರಾರಂಭವಾಗುವುದರ ಸೂಚನೆ. ಈ ಕಥೆ ಪರಿವರ್ತನೆಯ ಕುರಿತಾದ ರೋಚಕ ಕಥೆ. ಇದು ಯಾವುದೇ ದೇಶ ಕಾಲದಲ್ಲಿ ನಡೆದಂತೆ ತೋರಿಸಲಾಗಿಲ್ಲ, ಆದರೆ ಇದು ನಮ್ಮ ಕಾಲದ್ದಂತೂ ಅಲ್ಲ ಎನ್ನುವುದು ಸ್ಪಷ್ಟವಾಗಿದೆ.

ಒಂದು ರೀತಿಯಲ್ಲಿ ಇದು ಗಂಭೀರವಾದ ಭಾವನಾತ್ಮಕ ಕಥೆ. ಸ್ವಲ್ಪ ವಿಚಿತ್ರ ಮತ್ತು ಮನಸ್ಸನ್ನು ವಿಚಲಿತಗೊಳಿಸುವಂತಹದ್ದು ಅನ್ನಿಸುತ್ತದೆ.

*ವಾರ್ಷಿಕ ಕೂದಲು ಕತ್ತರಿಸುವ ದಿನ*ಕ್ಕೆ ವ್ಯತಿರಿಕ್ತವಾಗಿ ಇದು ಸರಳವಾದದ್ದಲ್ಲ ಹಾಗೂ ಭಾಷೆಯೂ ದಿನಬಳಕೆಯದ್ದಲ್ಲ. ಮಕ್ಕಳು ಈ ಕಥೆ ಕೇಳಿದಾಗ, ಅವರು ಓದಲು ಸಾಧ್ಯವಿಲ್ಲದ ಸಂಕೀರ್ಣ ವಾಕ್ಯ ಮತ್ತು ಪದಗಳ ಪರಿಚಯ ಅವರಿಗಾಗುತ್ತದೆ. ಭಾರತೀಯ ಸಾಂಸ್ಕೃತಿಕ ಪರಂಪರೆಯ ಭಾಗವಾದ ಪಂಚತಂತ್ರದ ಕಥೆಯ ಮೂಲಕ ಭಾಷೆಯ ಕುರಿತು ತಿಳಿಯುತ್ತಾರೆ.

ಈ ಕಥೆಯನ್ನು ಕೇಳಿದ ನಂತರ ಮಕ್ಕಳು:

- ಕಥೆಯನ್ನು ಪುನಃ ಹೇಳಬಹುದು
- ಕಥೆಯ ಮರುಸೃಷ್ಟಿ ಪ್ರಯತ್ನಿಸಬಹುದು
- ಕಥೆಯನ್ನು ಅಭಿನಯಿಸಬಹುದು
- ಪಾತ್ರಗಳ ನಡುವಿನ ಸಂಭಾಷಣೆಯನ್ನು ಹುಟ್ಟುಹಾಕಬಹುದು
- ದೃಶ್ಯಗಳನ್ನು ಚಿತ್ರಿಸಬಹುದು
- ಇದಕ್ಕೆ ಪೂರ್ವ ಕಥೆಯನ್ನು ಸೃಷ್ಟಿಸಬಹುದು (ಮಗನಿಗೆ ಹಾವಾಗುವಂತಹ ಶಾಪವೇಕೆ ಸಿಕ್ಕಿತು?)
- ಕಥಾ ವಿಸ್ತರಣೆ (ಹುಡುಗಿ ಮತ್ತ ಮಗನಿಗೆ ಮುಂದೇನಾಗುತ್ತದೆ? ಅವರಿಬ್ಬರಿಗೂ ಮರಿ ಹಾವುಗಳು ಹುಟ್ಟುತ್ತವಾ?)
- ಕಥೆಯನ್ನು ಇಡೀ ಶಾಲೆ ಅಥವಾ ಸಮುದಾಯದಲ್ಲಿ ಪ್ರದರ್ಶಿಸುವುದು

**ಚಿಂತನೆಗೊಂದು ಕ್ಷಣ**

ಎರಡೂ ಕಥೆಗಳನ್ನು ಓದಿ, ಅವುಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪರಿಗಣಿಸಿದ ನಂತರ, ಭಾಷೆ ಮತ್ತು ಸಾಕ್ಷರತೆಯ ಬೋಧನೆಗೆ ಈ ಕಥೆಗಳಿಂದ ಪ್ರಯೋಜನವಿದೆ ಅನ್ನಿಸಿತೇ?

ಇವೆರಡೂ ಕಥೆಗಳು ಶಾಲಾ ಪಠ್ಯಪುಸ್ತಕದ್ದಲ್ಲ. ಎರಡೂ ಕಥೆಗಳಲ್ಲಿ ಮಾತನಾಡಲು ಆಸಕ್ತಿದಾಯಕ ಸನ್ನಿವೇಶ ಮತ್ತು ಭಾಷೆ ಇದೆ, ಎರಡನ್ನೂ ವಿಸ್ತರಿಸಬಹುದು ಮತ್ತು ಬದಲಾಯಿಸಿಕೊಳ್ಳಬಹುದು ಮತ್ತು ಅನೇಕ ಭಾಷೆ ಮತ್ತು ಸಾಕ್ಷರತೆಯ ಚಟುವಟಿಕೆಗಳಿಗೆ ಬಳಸಿಕೊಳ್ಳಬಹುದು.

ಸಂಪನ್ಮೂಲ 3 ಮಕ್ಕಳೊಡನೆ ಬಳಸುವ ಸಾಹಿತ್ಯವನ್ನು ಆಯ್ಕೆ ಮಾಡುವಾಗ ಗಮನ ಹರಿಸಬೇಕಾದ ಅಂಶಗಳ ಕುರಿತು ಮಾರ್ಗದರ್ಶನ ನೀಡುತ್ತದೆ. ಸಂಪನ್ಮೂಲ 3 ಓದಿ,ನಿಮ್ಮ ತರಗತಿಯಲ್ಲಿರುವ ಸಾಹಿತ್ಯಕ ಸಂಪನ್ಮೂಲಗಳ ಬಗ್ಗೆ ಚಿಂತಿಸಿ.

## 3 ತರಗತಿಯಲ್ಲಿ ಕವನಗಳನ್ನು ಮತ್ತು ಕಥೆಗಳನ್ನು ಬಳಸುವುದು

ಮುಂದಿನ ಚಟುವಟಿಕೆಯಲ್ಲಿ, ಕವನದ ಭಾಷೆಯನ್ನು ಆಸ್ವಾದಿಸುವಿರಿ

### ಚಟುವಟಿಕೆ 4: ಕವನದ ರಸಾಸ್ವಾದನೆ

ಈ ಸಣ್ಣ ಕವನವನ್ನು ನಿಮ್ಮಷ್ಟಕ್ಕೆ ನೀವೇ ಅಥವಾ ಸಹೋದ್ಯೋಗಿಗೆ ಗಟ್ಟಿಯಾಗಿ ಓದಿ

**ರವೀಂದ್ರನಾಥ ಟ್ಯಾಗೋರ್ ರ 'ದಿನ ಮುಗಿದಿದ್ದರೆ'**

ದಿನ ಮುಗಿದಿದ್ದರೆ
ಹಕ್ಕಿ ಹಾಡ ಹಾಡದಿದ್ದರೆ
ಗಾಳಿ ಓಡೋಡಿ ಬಳಲಿದ್ದರೆ
ಮುಂಗತ್ತಲಲಿ ಜೋತ ಕಮಲದ ದಳಗಳನ್ನು ಕೋಮಲವಾಗಿ ಮುಚ್ಚಿದಂತೆ
ಭುವಿಯನು ನಿದ್ದೆಯ ಹೊದಿಕೆಯಲಿ ಸುತ್ತಿ ಮಲಗಿಸಿದಂತೆ
ದಟ್ಟ ಕತ್ತಲೆಯ ಮುಸುಕನು ಹೊದಿಸು ನನ್ನ ಮೇಲೆ

ಈಗ ಈ ಪ್ರಶ್ನೆಗಳಿಗೆ ಉತ್ತರಿಸಿ

- ಈ ಪದ್ಯ ಓದಿ ನಿಮಗೆ ಸಂತೋಷವಾಯಿತೇ ಅಥವಾ ದುಃಖವಾಯಿತೇ? ಏಕೆ ಹೀಗಾಯಿತು?
- ಇದು ನಿಮ್ಮನ್ನು ಯಾವುದರ ಬಗ್ಗೆ ಚಿಂತನೆಗೆ ಹಚ್ಚಿತು?
- ಸಣ್ಣ ಮಕ್ಕಳು ಇದನ್ನು ಅನುಭವಿಸಿ ಸಂತೋಷಗೊಳ್ಳಬಲ್ಲರೇ? ಏಕೆ ಅಥವಾ ಏಕಿಲ್ಲ?
- 'ದಟ್ಟ ಕತ್ತಲೆಯ ಮುಸುಕು', 'ಭುವಿಯನು ನಿದ್ದೆಯ ಹೊದಿಕೆಯಲಿ ಸುತ್ತಿ' ಮತ್ತು 'ಜೋತ ಕಮಲದ ದಳ' ದಂತಹ ಪದಗುಚ್ಛಗಳಲ್ಲಿರುವ ಒಳಾರ್ಥಗಳನ್ನು ಹೇಗೆ ತಿಳಿಯುವಿರಿ? ಇದನ್ನು ವಿದ್ಯಾರ್ಥಿಗಳಿಗೆ ಹೇಗೆ ವಿವರಿಸುವಿರಿ?

ಈ ಪದಗುಚ್ಛಗಳಿಗೆ ನೀವು ಕೊಡುವ ವಿವರಣೆಗಳನ್ನು ನಿಮ್ಮ ಸಹೋದ್ಯೋಗಿಯೊಂದಿಗೆ ಹಂಚಿಕೊಳ್ಳಿ, ನೀವು ಅಥವಾ ನಿಮ್ಮ ವಿದ್ಯಾರ್ಥಿಗಳು ಈ ಕಾವ್ಯ ರೂಪಕಗಳನ್ನು ಚಿತ್ರಿಸಲು ಅಥವಾ ಅಭಿನಯಿಸಲು ಸಾಧ್ಯವೇ?

**ಚಿಂತನೆಗೊಂದು ಕ್ಷಣ**

ಬಹಳ ಸಣ್ಣ ವಯಸ್ಸಿನ ಮಕ್ಕಳು ಸಹ ಕವನಗಳನ್ನು ಆಸ್ವಾದಿಸಲು ಸಾಧ್ಯ. ಅದರ ಪ್ರತೀ ಪದವೂ ಅರ್ಥವಾಗದೇ ಇರಬಹುದು, ಆದರೆ ಕವನದ ಲಯ ಮತ್ತು ಧ್ವನಿಯನ್ನು ಮಕ್ಕಳು ಪ್ರೀತಿಸುತ್ತಾರೆ. ಅವರಿಗೆ ಓದಲಾಗದ ಪದ ಮತ್ತು ವಾಕ್ಯಾಂಶಗಳನ್ನು ಕಲಿಯಲೂ ಸಾಧ್ಯ.

- ನೀವು ತರಗತಿಯಲ್ಲಿ ಯಾವ ಪದ್ಯಗಳನ್ನು ಬಳಸಿದ್ದೀರಿ?
- ಯಾವುದನ್ನು ಬಳಸಬಹುದಾಗಿತ್ತು?

ಉತ್ತಮ ಗುಣಮಟ್ಟದ ಸಾಹಿತ್ಯವನ್ನು ಆಲಿಸುವುದರಿಂದ ಈ ಪದಗಳನ್ನು ತಾವೇ ಓದಲು ಮಕ್ಕಳು ತಯಾರಾಗುತ್ತಾರೆ. ಈ ಘಟಕದಲ್ಲಿನ ಕೊನೆಯ ಕೆಲವು ಚಟುವಟಿಕೆಗಳು ಸಾಹಿತ್ಯವನ್ನು ನಿಮ್ಮ ವಿದ್ಯಾರ್ಥಿಗಳಿಗೆ ಪರಿಚಯಿಸಲು ಮಾರ್ಗದರ್ಶನ ನೀಡುತ್ತವೆ.

ಶಾಲೆಯ ಇಡೀ ದಿನದಲ್ಲಿ ಒಂದು ಸಣ್ಣ ಕಥೆ ಹೇಳಲು ಅಥವಾ ಪದ್ಯ ಹೇಳಲು ನಿಮಗೆ ಅನೇಕ ಕ್ಷಣಗಳು ಸಿಗುತ್ತವೆ. ನಿಮ್ಮ ಒಟ್ಟಾರೆ ವೇಳಾ ಪಟ್ಟಿಯ ಮೇಲೆ ಇದು ಯಾವ ರೀತಿಯ ಪರಿಣಾಮವನ್ನೂ ಬೀರುವುದಿಲ್ಲ.

ಮೊದಲಿಗೆ, ಈ ಆಲಿಸುವಿಕೆ ಚಟುವಟಿಕೆಯ ಜೊತೆ ಯಾವುದೇ ಭಾಷಾ ಅಥವಾ ಬರವಣಿಗೆ ಚಟುವಟಿಕಯನ್ನು ಸೇರಿಸಬೇಡಿ. ಇವುಗಳು ನಿಮಗೆ ನಿಮ್ಮ ವಿದ್ಯಾರ್ಥಿಗಳ ಜೊತೆ ಸಂತಸದಿಂದ ಸಮಯ ಕಳೆಯುವ ಅವಕಾಶಗಳಾಗಿರಲಿ.

### ಚಟುವಟಿಕೆ 5: ತರಗತಿಯಲ್ಲಿ ಕವನ ವಾಚನ

1. ನಿಮಗೆ ತಿಳಿದಿರುವ ಒಂದು ಸಣ್ಣ ಪದ್ಯವನ್ನು ಆಯ್ಕೆ ಮಾಡಿಕೊಳ್ಳಿ. ಇದನ್ನು ಕಂಠಪಾಠ ಮಾಡಿಕೊಂಡು, ಮನೆಯಲ್ಲಿ ಅಥವಾ ಸಹೋದ್ಯೋಗಿಗಳೊಂದಿಗೆ ಅಭ್ಯಾಸ ಮಾಡಿಕೊಳ್ಳಿ.
2. ಮಕ್ಕಳಿಗೆ ಇದನ್ನು ಹೇಳಲು ಒಂದು ಸೂಕ್ತ ಸಮಯ ಆಯ್ಕೆ ಮಾಡಿಕೊಳ್ಳಿ. ಇದು ದಿನದ ಮೊದಲಿಗೆ ಇರಬಹುದು, ಊಟದ ಮುಂಚೆ ಅಥವಾ ಊಟ ಮುಗಿಸಿದ ಕೂಡಲೇ ಇರಬಹುದು ಅಥವಾ ದಿನದ ಕೊನೆಯಲ್ಲಿ ಇರಬಹುದು. ಪದ್ಯದ ಶೀರ್ಷಿಕೆಯನ್ನು ಕಪ್ಪು ಹಲಗೆಯ ಮೇಲೆ ಬರೆಯಿರಿ.
3. ಪದ್ಯ ಹೇಳುವಾಗ ಮಕ್ಕಳ ಕಣ್ಣಲ್ಲಿ ಕಣ್ಣಿಟ್ಟು ನೋಡಿರಿ. ಇದರಲ್ಲಿರುವ ಕೆಲವು ಪದಗಳನ್ನು ನೀವು ವಿವರಿಸುವ ಅಗತ್ಯವಿರಬಹುದು ಅಥವಾ ಕಪ್ಪುಹಲಗೆಯ ಮೇಲೆ ಚಿತ್ರ ಬರೆಯಬಹುದು.
4. ಇದೇ ಪದ್ಯವನ್ನು ಎರಡು ಮೂರು ವಾರ ಪುನಃ ಪುನಃ ಹೇಳಿರಿ. ಇದರಿಂದ ಅವರಿಗೆ ಪದ್ಯ ತಿಳಿಯುತ್ತದೆ.
5. ಹೇಳುವಾಗ ವಿದ್ಯಾರ್ಥಿಗಳಿಗೂ ನಿಮ್ಮ ಜೊತೆ ಸೇರಿಕೊಳ್ಳಲು ಕರೆಯಿರಿ. ಬಹುಶಃ ಅವರು ಆಂಗಿಕ ಚಲನೆ ಅಥವಾ ಅಭಿನಯದೊಂದಿಗೆ ನಿಮ್ಮ ಜೊತೆಗೂಡಬಹುದು.
6. ನೀವಿಲ್ಲದೇ ಅವರೇ ಗುಂಪುಗಳಲ್ಲಿ ಅಥವಾ ಜೋಡಿಗಳಲ್ಲಿ ವಾಚಿಸುವುದಕ್ಕೆ ಹೇಳಿ. ಈ ಸಮಯದಲ್ಲಿ ಅವರು ಅರ್ಥೈಸಿಕೊಂಡಿರುವುದನ್ನು ಮತ್ತು ಅವರಿಗೆ ಭಾಷೆಯಲ್ಲಿರುವ ಆತ್ಮವಿಶ್ವಾಸವನ್ನು ಗಮನಿಸಬಹುದು.

## ಚಟುವಟಿಕೆ 6: ತರಗತಿಗೆ ಗಟ್ಟಿ ಓದು

ಪುಸ್ತಕದಲ್ಲಿರುವ ಉತ್ತಮ ಗುಣಮಟ್ಟದ ಮಕ್ಕಳ ಕಥೆಯೊಂದನ್ನು ಆಯ್ಕೆ ಮಾಡಿಕೊಳ್ಳಿ. ಮನೆಯಲ್ಲಿ ಅಥವಾ ಸಹೋದ್ಯೋಗಿಯೊಂದಿಗೆ ಗಟ್ಟಿಯಾಗಿ ಓದಿ ಕಥೆಯನ್ನು ಮನದಟ್ಟು ಮಾಡಿಕೊಳ್ಳಿ.

ಪುಸ್ತಕವನ್ನು ನಿಮ್ಮ ವಿದ್ಯಾರ್ಥಿಗಳಿಗೆ ಪರಿಚಯಿಸಿ. ಅವರನ್ನು ನಿಮ್ಮ ಸುತ್ತ ತರಗತಿಯಲ್ಲಿ ಅಥವಾ ಹೊರಗಡೆ ಮರದಡಿ ಅರ್ಧಚಂದ್ರಾಕಾರದಲ್ಲಿ ಕೂರಿಸಿ.

ಮಕ್ಕಳಿಗೆ ಪುಸ್ತಕದ ಮುಖಪುಟದ ಪರಿಚಯ ಮಾಡಿಕೊಡಿ. ಅವರಿಗೆ ಈ ಪುಸ್ತಕ ಯಾವುದರ ಕುರಿತಾಗಿ ಇರಬಹುದೆಂದು ಅನ್ನಿಸುತ್ತದೆ ಎಂದು ಕೇಳಿ. ಮುಖಪುಟದಲ್ಲಿ ಕಾಡಿನ ಚಿತ್ರವಿದ್ದರೆ, ತರಗತಿಯಲ್ಲಿ ಯಾರಾದರೂ ಕಾಡು ನೋಡಿರುವರೇ, ನೋಡಿದ್ದರೆ ಅದು ಹೇಗಿತ್ತು ಎಂದು ಕೇಳಿ. ಅಥವಾ ಮಳೆಯ ಚಿತ್ರವಿದ್ದರೆ, ನಿಮ್ಮ ವಿದ್ಯಾರ್ಥಿಗಳಿಗೆ ಮಳೆ ಇಷ್ಟವೇ ಇಲ್ಲವೇ ಮತ್ತು ಏಕೆ ಎಂದು ಕೇಳಿ. ಈಗ ಪುಸ್ತಕದ ಹೆಸರು ಓದಿ, ಪುಸ್ತಕ ಯಾವುದರ ಕುರಿತಾಗಿದೆ ಎಂದು ಮತ್ತೊಮ್ಮೆ ಕೇಳಿ.

ಪುಸ್ತಕವನ್ನು ಅವರ ಕಡೆಗೆ ತಿರುಗಿಸಿ ಎಲ್ಲರಿಗೂ ಪದಗಳು ಮತ್ತು ಚಿತ್ರಗಳು ಕಾಣಿಸುವಂತೆ ಹಿಡಿದುಕೊಳ್ಳಿ. ಸಣ್ಣ ವಯಸ್ಸಿನ ಮಕ್ಕಳಾದರೆ, ಓದುತ್ತಿರುವ ಪದದ ಕೆಳಗೆ ನಿಮ್ಮ ಬೆರಳಿಡುವುದು ಒಳ್ಳೆಯದು.

ಕಥೆಯನ್ನು ನಿಧಾನವಾಗಿ ಭಾವಪೂರ್ಣತೆಯಿಂದ ಓದುತ್ತಾ, ಸೂಕ್ತ ಸಮಯದಲ್ಲಿ ಅವರ ಗಮನವನ್ನು ಚಿತ್ರದ ಕಡೆಗೆ ಸೆಳೆಯಿರಿ.

ಮುಗಿದ ನಂತರ ಕೆಳಗಿನ ಪ್ರಶ್ನೆಗಳನ್ನು ಕೇಳಿರಿ:

- ಈ ಕಥೆಯಲ್ಲಿ ನಿಮಗೇನು ಇಷ್ಟವಾಯಿತು?
- ನಿಮಗೆ ಇಷ್ಟವಾಗದಿರುವುದು ಏನಾದರೂ ಇತ್ತೇ?
- ಇದರಲ್ಲಿರುವುದು ಏನಾದರೂ ನಿಮ್ಮಲ್ಲಿ ಗೊಂದಲ ಸೃಷ್ಟಿ ಮಾಡಿತೇ? ಯಾವುದದು?

ಇದೇ ಪುಸ್ತಕವನ್ನು ಮಾರನೇ ವಾರ, ಅದರ ಮುಂದಿನ ವಾರ ಪುನಃ ಓದಿ. ಇದರಿಂದ ಪುಸ್ತಕವನ್ನು ವಿದ್ಯಾರ್ಥಿಗಳು ಚನ್ನಾಗಿ ತಿಳಿದುಕೊಳ್ಳುತ್ತಾರೆ.

ವಿದ್ಯಾರ್ಥಿಗಳಿಗೆ ಗುಂಪುಗಳಲ್ಲಿ ಅಥವಾ ಜೋಡಿಗಳಲ್ಲಿ ಕಥೆಯನ್ನು ಪುನಃ ಹೇಳಲು ಸೂಚಿಸಿ, ಯಾವ ವಿದ್ಯಾರ್ಥಿಗಳು ಕಥೆಯನ್ನು ನೆನಪಿಸಿಕೊಳ್ಳುತ್ತಾರೆ ಮತ್ತು ಯಾರಿಗೆ ವಿಸ್ತರಿಸಲು ಅಥವಾ ಬದಲಾಯಿಸಲು ಆಗುತ್ತಿದೆ ಎನ್ನುವುನ್ನು ಗಮನಿಸಿ. ಯಾರಿಗೆ ಆಸಕ್ತಿ ಮತ್ತು ಗ್ರಹಿಕೆ ಆಗಿದೆ ಮತ್ತು ಯಾರಿಗೆ ಅನಾಸಕ್ತಿ, ಗೊಂದಲವಿದೆ ಎನ್ನುವುದನ್ನು ಗಮನಿಸಿ.

ನೀವು ಮುಂದಿನ ಓದಿಗೆ ಆಯ್ಕೆ ಮಾಡುವ ಪುಸ್ತಕ, ನಿಮ್ಮ ವಿದ್ಯಾರ್ಥಿಗಳ ಪ್ರತಿಕ್ರಿಯೆಯನ್ನು ಆಧರಿಸಿರಲಿ.

ಸಂಪನ್ಮೂಲ 4 ತರಗತಿಯಲ್ಲಿ ಕಥೆಹೇಳುವುದನ್ನು ಬಳಸುವುದಕ್ಕೆ ಸಲಹೆಗಳನ್ನು ಒಳಗೊಂಡಿದೆ.

**Video: Storytelling, songs, role play and drama**

**ಚಿಂತನೆಗೊಂದು ಕ್ಷಣ**

- ಮೇಲಿನ ಸ್ಥೂಲಚಿತ್ರವನ್ನು ಆಧರಿಸಿ ಮಾಡಿದ ಕವನ ವಾಚನ ಅಥವಾ ಕಥೆ ಓದುವ ಚಟುವಟಿಕೆಗಳ ಅನುಭವ ಹೇಗಿತ್ತು?
- ಇದಕ್ಕ ನಿಮ್ಮ ವಿದ್ಯಾರ್ಥಿಗಳು ಹೇಗೆ ಪ್ರತಿಕ್ರಿಯಿಸಿದರು?

ನೀವು ಎಂದೂ ಕವನ ವಾಚನ ಮಾಡದಿದ್ದ ಅಥವಾ ಗಟ್ಟಿಯಾಗಿ ಕಥೆ ಓದದ ಪಕ್ಷದಲ್ಲಿ, ಮೊದಲ ಸಲ ಸ್ವಲ್ಪ ಗಾಬರಿಯಾಗುವುದು ಸಹಜ. ಆದರೆ, ನೀವು ಮತ್ತು ನಿಮ್ಮ ವಿದ್ಯಾರ್ಥಿಗಳೂ ಬೋಧನೆ-ಕಲಿಕೆಯಲ್ಲಿ ಇಂತಹ ಚಟುವಟಿಕೆಗಳನ್ನು ಪದೇ ಪದೇ ಸೇರಿಸಿಕೊಳ್ಳುವುದರ ಮೂಲಕ ಇದಕ್ಕೆ ಹೊಂದಿಕೊಳ್ಳುವಿರಿ.  ನಂತರದ ಸಮಯದಲ್ಲಿ ನಿಮ್ಮ ವಿದ್ಯಾರ್ಥಿಗಳು ಈ ಚಟುವಟಿಕೆಗಳಿಗಾಗಿ ಕಾತರತೆಯಿಂದ ಕಾಯುವರು ಮತ್ತು ಆನಂದಿಸುವರು - ಬಹುಶಃ ಅವರಾಗಿಯೇ ಕವನ ವಾಚನ ಮತ್ತು ಕಥೆ ಓದುವುದನ್ನು ಪ್ರಾರಂಭಿಸುವರು ಸಹ.

## 4 ಸಾರಾಂಶ


ಈ ಘಟಕದಲ್ಲಿ ನೀವು ಮಕ್ಕಳ ಸಾಹಿತ್ಯದ ಜ್ಞಾನವನ್ನು ಪರಿಶೋಧಿಸಿಕೊಂಡಿದ್ದೀರಿ ಮತ್ತು ಉತ್ತಮ ಗುಣಮಟ್ಟದ ಮಕ್ಕಳ ಕಥೆಗಳ ಗುಣಲಕ್ಷಣಗಳನ್ನು ತಿಳಿದಿದ್ದೀರಿ,  ಕವನ ವಾಚನ ಮತ್ತು ಕಥೆ ಹೇಳುವುದಕ್ಕೆ ಹೆಚ್ಚಿನ ಅವಕಾಶಗಳನ್ನು ಸೃಷ್ಟಿಸುವ ಬಗ್ಗೆ ಚಿಂತನೆ ನಡೆಸಿದ್ದೀರಿ.  ಈ ರೀತಿಯ ಚಟುವಟಿಕೆಗಳನ್ನು ಸಾಮಾನ್ಯವಾಗಿ ಯಾವಾಗಲೂ ಬೋಧನೆಯಲ್ಲಿ ಅಳವಡಿಸಿಕೊಂಡರೆ, ನಿಮ್ಮ ವಿದ್ಯಾರ್ಥಿಗಳು ಇವನ್ನು ನಿರೀಕ್ಷಿಸಿ ಆನಂದಿಸುತ್ತಾರೆ ಮತ್ತು ಕಥೆ ಕವನ ತಾವಾಗಿಯೇ ಓದಲು ಸ್ಫೂರ್ತಿ ಪಡೆಯುತ್ತಾರೆ.  ತನ್ಮೂಲಕ ಅವರ ಸಾಕ್ಷರತಾ ಬೆಳವಣಿಗೆ ಸಾಧ್ಯವಾಗುತ್ತದೆ.


## ಸಂಪನ್ಮೂಲಗಳು

### ಸಂಪನ್ಮೂಲ1 :  ವಾರ್ಷಿಕ ಕೂದಲು ಕತ್ತರಿಸುವ ವಿಧಾನ





ಆದರೆ ದರ್ಜಿ “ಇಷ್ಟು ಉದ್ದ ಕೂದಲು ಕತ್ತರಿಸಲು ನನಗೆ ಈವತ್ತು ಸಮಯವಿಲ್ಲ” ಎಂದು ಹೇಳಿದನು.


ಮತ್ತೆ ಸ್ವಲ್ಪ ಚಿಂತೆ ಮಾಡಿಕೊಂಡು ಶೃಂಗೇರಿ ಶ್ರೀನಿವಾಸ ಇನ್ನೊಬ್ಬ ಸ್ನೇಹಿತ ಬಡಗಿಯ ಮನೆಗೆ ಹೋದನು.


ಆದರೆ ಬಡಗಿ “ ಇಷ್ಟು ಉದ್ದ ಕೂದಲು ಕತ್ತರಿಸಲು ನನಗೆ ಈವತ್ತು ಸಮಯವಿಲ್ಲ” ಎಂದು ಹೇಳಿದನು.


ಪಾಪ! ಶೃಂಗೇರಿ ಶ್ರೀನಿವಾಸ !! ವಾರ್ಷಿಕ ಕೂದಲು ಕತ್ತರಿಸುವ ದಿನ ಯಾರೂ ಅವನ ಕೂದಲು ಕತ್ತರಿಸುತ್ತಿಲ್ಲ!


ಕಣ್ಣೀರು ಸುರಿಸುತ್ತಾ, ಅವನು ಹಳ್ಳಿಯ ಬಳಿಯ ಕಾಡಿಗೆ ಹೋದನು.


ಅಲ್ಲಿ ಮರದ ಕೆಳಗೆ ಕುಳಿತು ಜೋರಾಗಿ ಅತ್ತನು.



ದಿನ ಮುಗಿದೇ ಹೋಗುತ್ತಿದೆ. ನನ್ನ ಕೂದಲು ಕತ್ತರಿಸುವ ಹರಕೆ ತೀರಲೇ ಇಲ್ಲ ಎಲ್ಲವೋ ದೇವರೇ ನನಗೆ ಸಹಾಯ ಮಾಡು



ನೆಮ್ಮದಿಯಿಂದ ನಿದ್ದೆ ಮಾಡುತ್ತಿದ್ದ ಹುಲಿಗೆ ಈ ಗಲಾಟೆಯಿಂದ ಎಚ್ಚರವಾಯಿತು


ತನ್ನ ಚೂಪಾದ ಉಗುರುಗಳನ್ನು ಝಳಪಿಸುತ್ತಾ, ಘರ್ಜಿಸುತ್ತಾ ಗುಹೆಯಿಂದ ಆಚೆ ಬಂತು.


ಶೃಂಗೇರಿ ಶ್ರೀನಿವಾಸನಿಗೆ ಭಯ ಆಗಿ, ಭಯ ಆಗಿ, ಭಯ ಆಗಿ ........................




ಶೃಂಗೇರಿ ಶ್ರೀನಿವಾಸ ಹಳ್ಳಿಗೆ ವಾಪಸ್ ಬಂದ. ಹುಲಿ ವಾಪಸ್ ಮಲಕೊಂಡ್ತು.




## ಸಂಪನ್ಮೂಲ 2: ಹಾವನ್ನು ಮದುವೆಯಾದ ಹುಡುಗಿ

ಒಂದಾನೊಂದು ಕಾಲದಲ್ಲಿ, ಒಂದು ಹಳ್ಳಿಯಲ್ಲಿ ಬ್ರಾಹ್ಮಣನೊಬ್ಬ ಅವನ ಹೆಂಡತಿಯ ಜೊತೆ ವಾಸ ಮಾಡುತ್ತಿದ್ದ. ಅವರಿಗೆ ಮಕ್ಕಳಿರಲಿಲ್ಲ. ಇದರಿಂದ ಅವರಿಬ್ಬರಿಗೂ ದುಃಖವಾಗಿತ್ತು. ಆದರೂ ದಿನಾಲೂ ಅವರಿಬ್ಬರೂ ಎಂದಾದರೂ ಒಂದು ದಿನ ತಮಗೆ ಮಗು ಆಗುವುದೆನ್ನುವ ಭರವಸೆ ಇಟ್ಟುಕೊಂಡು ಶ್ರದ್ಧೆಯಿಂದ ದೇವರ ಪ್ರಾರ್ಥನೆ ಮಾಡುತ್ತಿದ್ದರು. ಕೊನೆಗೊಂದು ದಿನ ಅವರಿಗೆ ಮಗುವಾಯಿತು, ಬ್ರಾಹ್ಮಣನ ಹೆಂಡತಿ ಗಂಡು ಮಗುವಿಗೆ ಜನ್ಮ ಕೊಟ್ಟಳು, ಆದರೆ ಅದು ಹುಟ್ಟಿದ ನಂತರ ಹಾವಾಗಿ ಹೋಯಿತು. ಹಳ್ಳಿಯ ಜನರೆಲ್ಲರೂ ಗಾಬರಿಯಾಗಿ, ಹಾವನ್ನು ಆದಷ್ಟು ಬೇಗ ಎಲ್ಲಿಯಾದರೂ ಬಿಟ್ಟು ಬಿಡಬೇಕೆಂದು ಬುದ್ಧಿವಾದ ಹೇಳಿದರು.

ಆದರೆ ಬ್ರಾಹ್ಮಣನ ಹೆಂಡತಿ ದೃಢ ನಿರ್ಧಾರ ತೆಗೆದುಕೊಂಡು, ತಾನು ಯಾರ ಮಾತನ್ನೂ ಕೇಳುವುದಿಲ್ಲವೆಂದೂ ಮತ್ತು ತನ್ನ ಮಗನನ್ನೂ ಸಾಕುತ್ತೇನೆಂದೂ ಹೇಳಿದಳು. ಅವಳು ತನ್ನ ಮಗು ಹಾವಾಯಿತೆಂದು ದುಃಖಿಸಲಿಲ್ಲ ಮತ್ತು ಹಾವನ್ನು ತನ್ನ ಮಗನ ಹಾಗೆಯೇ ಪ್ರೀತಿಸಿದಳು. ಮಮತೆ ವಾತ್ಸಲ್ಯದಿಂದ ಅದನ್ನು ಬೆಳೆಸಿದಳು. ಅದಕ್ಕೆ ಸವಿಯಾದ ಅಡುಗೆಯನ್ನೇ ಬಡಿಸಿದಳು. ಡಬ್ಬದಲ್ಲಿ ಮೆತ್ತನೆಯ ಹಾಸಿಗೆ ಮಾಡಿ ಅದರಲ್ಲಿ ಮಲಗಿಸಿದಳು. ಹಾವು ದೊಡ್ಡದಾಗುತ್ತಿತ್ತು. ಅದರ ತಾಯಿಗೆ ಅದರ ಮೇಲೆ ಪ್ರೀತಿ ಹೆಚ್ಚಾಗುತ್ತಿತ್ತು. ಒಂದು ದಿನ ಅವರ ನೆರೆಯಲ್ಲಿ ಒಂದು ಮದುವೆ ನಡೆಯಿತು. ಮದುವೆ ಮುಗಿಸಿ ಬರುವಾಗ ಬ್ರಾಹ್ಮಣನ ಹೆಂಡತಿ ತನ್ನ ಮಗನಿಗೂ ಮದುವೆ ಮಾಡಬೇಕೆಂದು ಯೋಚಿಸಿದಳು. ಆದರೆ ಯಾವ ಹುಡುಗಿ ತಾನೇ ಹಾವನ್ನು ಮದುವೆಯಾಗುವಳು?

ಒಂದು ದಿನ ಬ್ರಾಹ್ಮಣ ಹೊರಗಿನಿಂದ ಬಂದಾಗ ತನ್ನ ಹೆಂಡತಿ ಅಳುತ್ತಿರುವುದನ್ನು ನೋಡಿದ. “ಯಾಕೆ? ಏನಾಯಿತು? ಯಾಕೆ ಅಳುತ್ತಿರುವೆ?” ಎಂದು ಕೇಳಿದ. ಅವಳೇನೂ ಹೇಳಲಿಲ್ಲ, ಅಳುವುದನ್ನೂ ನಿಲ್ಲಿಸಲಿಲ್ಲ. ಬ್ರಾಹ್ಮಣ ಮತ್ತೆ ಮತ್ತೆ ಕೇಳಿದ, “ನಿನಗೆ ಯಾಕೆ ಇಷ್ಟೊಂದು ದುಃಖ ಆಗ್ತಿದೆ, ಹೇಳು” ಅಂತ. ಕಡೆಗೆ ಅವಳು ಹೇಳಿದಳು, ‘ನಿನಗೆ ನನ್ನ ಮಗನ ಕಂಡರೆ ಇಷ್ಟ ಇಲ್ಲ ಅಂತ ನನಗೆ ಗೊತ್ತು. ನಿನಗೆ ಅವನ ಕಂಡರೆ ಕಾಳಜಿ ಇಲ್ಲ ಅಂತಾನೂ ಗೊತ್ತು. ಅವನೀಗ ಬೆಳೆದು ದೊಡ್ಡವನಾಗಿದ್ದಾನೆ. ಅವನಿಗೊಂದು ಹೆಣ್ಣು ತರಬೇಕು ಅಂತಾನೂ ನಿನ್ನ ತಲೆಗೆ ಹೊಳೆದಿಲ್ಲ’. ಈ ಮಾತು ಕೇಳಿ ಬ್ರಾಹ್ಮಣನಿಗೆ ಆಶ್ಚರ್ಯ ಆಗಿ ಹೋಯಿತು. ಅವನು ಹೇಳಿದ, ‘ಹೆಣ್ಣು, ನಮ್ಮ ಮಗನಿಗೆ? ಯಾರಾದ್ರೂ ಹಾವನ್ನು ಮದುವೆ ಆಗ್ತಾರಾ? ನೀನೇ ಹೇಳು’

ಹೆಂಡತಿ ಏನೂ ಹೇಳಲಿಲ್ಲ. ಅಳೋದನ್ನೂ ನಿಲ್ಲಿಸಲಿಲ್ಲ. ಸರಿ ಅವಳು ಹೀಗೆ ದುಃಖಿಸುವುದನ್ನು ನೋಡಕ್ಕೆ ಆಗದೇ, ಬ್ರಾಹ್ಮಣ ಊರಿಂದ ಹೊರಗ್ಹೋಗಿ ಹೆಣ್ಣು ಹುಡುಕುವುದು ಅಂತ ನಿರ್ಧಾರ ಮಾಡಿದ, ಊರೂರು ಅಲೆದರೂ ಹಾವು ಮದುವೆ ಮಾಡಿಕೊಳ್ಳೋ ಯಾವ ಹುಡುಗೀನೂ ಅವನಿಗೆ ಸಿಗಲಿಲ್ಲ. ಕಡೆಗೆ ಅವನ ಸ್ನೇಹಿತನೊಬ್ಬ ಇರೋ ಒಂದು ದೊಡ್ಡ ನಗರಕ್ಕೆ ಬಂದ.

ಬಹಳ ದಿನಗಳ ನಂತರ ಸಿಕ್ಕ ಇಬ್ಬರಿಗೂ ತುಂಬಾ ಖುಷಿ ಆಯಿತು, ಸಂತೋಷವಾಗಿ ಒಟ್ಟಿಗೆ ಕಾಲ ಕಳೆದರು. ಮಾತಿಗೆ ಮಾತು ಬಂದು, ಸ್ನೇಹಿತ ಬ್ರಾಹ್ಮಣನನ್ನು ಊರೂರು ಯಾಕೆ ಸುತ್ತುತ್ತಾ ಇದ್ದೀಯ ಅಂತ ಕೇಳಿದ. ಅದಕ್ಕೆ ಬ್ರಾಹ್ಮಣ, ‘ನನ್ನ ಮಗನಿಗೆ ಹೆಣ್ಣು ಹುಡುಕ್ತಾ ಇದ್ದೀನಿ’ ಅಂತ ಉತ್ತರ ಕೊಟ್ಟ. ಇದಕ್ಕೆ ಸ್ನೇಹಿತ ‘ನೀನು ಮುಂದೆ ಎಲ್ಲೂ ಹೋಗಬೇಕಾಗಿಲ್ಲ. ನನ್ನ ಮಗಳನ್ನೇ ನಿನ್ನ ಮಗನಿಗೆ ತಂದುಕೊಳ್ಳಬಹುದು’ ಎಂದು ಹೇಳಿದ. ಬ್ರಾಹ್ಮಣನ ಚಿಂತೆ ಹೆಚ್ಚಾಯ್ತು. ಅವನು, ‘ನೀನು ನನ್ನ ಮಗನ್ನ ಒಂದು ಸಲ ನೋಡಿ, ನಿರ್ಧಾರ ಮಾಡು’ ಅಂತ ಹೇಳಿದ.

ಸ್ನೇಹಿತ ಇದಕ್ಕೆ ಒಪ್ಪಲಿಲ್ಲ. ಬ್ರಾಹ್ಮಣ, ಅವನ ಮನೆತನವೆಲ್ಲಾ ಗೊತ್ತಿರುವುದರಿಂದ ಹುಡುಗನ್ನ ನೋಡೋ ಆವಶ್ಯಕತೆ ಇಲ್ಲ ಅಂತ ಹೇಳಿ, ತನ್ನ ಮಗಳನ್ನ ಅವನ ಜೊತೆ ಕಳುಹಿಸಿಯೇ ಬಿಟ್ಟ. ಬ್ರಾಹ್ಮಣನ ಹೆಂಡತಿಗೆ ಇವರು ಬರುತ್ತಿರುವ ಸಮಾಚಾರ ಮುಂಚಿತವಾಗಿಯೇ ತಿಳಿದು ಮದುವೆ

ಸಿದ್ಧತೆ ಎಲ್ಲ ಮಾಡಿಕೊಂಡಳು.  ಹಳ್ಳಿಯವರಿಗೆ ಇದು ಗೊತ್ತಾಗಿ, ಅವರು ಹುಡುಗಿಗೆ ಹಾವನ್ನು ಮದುವೆ ಮಾಡಿಕೋ ಬೇಡ ಅಂತ ಎಚ್ಚರಿಕೆ ಕೊಟ್ರು.  ಹುಡುಗಿ ಅವರ ಮಾತಿಗೆ ಬೆಲೆ ಕೊಡದೇ,ತನ್ನ ತಂದೆ ಮಾತು ಉಳಿಸಿಕೊಡ್ತೀನಿ ಅಂತ ಪಟ್ಟು ಹಿಡಿದಳು.

ಸರಿ, ಹಾವಿನ ಜೊತೆ ಹುಡುಗಿ ಮದುವೆ ನಡೆದ್ಹೋಯ್ತು.  ಹುಡುಗಿ ತನ್ನ ಗಂಡ ಹಾವಿನ ಜೊತೆ ಜೀವನ ಶುರು ಮಾಡಿದ್ಲು.  ಅವಳು ಎಲ್ಲ ಹೆಂಡ್ತೀರ ತರಹಾನೇ ತನ್ನ ಗಂಡನ ಸೇವೆ ಮಾಡ್ತಾ ಇದ್ದಳು.  ಹಾವು ರಾತ್ರಿ ಹೊತ್ತು ತನ್ನ ಹಾಸಿಗೆ ಡಬ್ಬದಲ್ಲಿ ಮಲಗಿ ಕೊಳ್ಳುತ್ತಾ ಇತ್ತು.  ಒಂದು ದಿನ ಹುಡುಗಿ ಮಲಗಿಕೊಳ್ಳಕ್ಕೆ ಹೋದಾಗ, ಅವಳು ಒಬ್ಬ ಸುಂದರ ಯುವಕನನ್ನ ನೋಡಿದ್ಲು.  ನೋಡಿದ ತಕ್ಷಣ ಭಯ ಆಗಿ, ಓಡಿ ಹೋಗೋದರಲ್ಲಿ ಇದ್ದಳು.  ಆಗ ಯುವಕ ಅವಳನ್ನು ತಡೆದು, 'ಹೆದರ್ಕೋ ಬೇಡ.  ನಾನ್ಯಾರು ಗೊತ್ತಾಗಲಿಲ್ಲವಾ? ನಾನು ನಿನ್ನ ಗಂಡ' ಅಂತ ಹೇಳಿದ.

ಈ ಮಾತನ್ನು ಹುಡುಗಿ ನಂಬಲಿಲ್ಲ.  ಯುವಕ ಹಾವಾಗಿ ಮತ್ತೆ ಮನುಷ್ಯ ಆಗಿ ತೋರಿಸಿದ ಮೇಲೆ ಅವಳಿಗೆ ನಂಬಿಕೆ ಬಂತು.  ಅವಳಿಗೆ ತುಂಬಾ ಸಂತೋಷವಾಯಿತು.  ಅಂದಿನಿಂದ ಪ್ರತೀ ರಾತ್ರಿಯೂ ಹಾವು ಮನುಷ್ಯ ಆಗಿ ಅವನ ಹೆಂಡತಿ ಜೊತೆ ಇದ್ದು, ತಿರುಗಿ ಬೆಳಿಗ್ಗೆ ಆದ ತಕ್ಷಣ ಹಾವಾಗ್ತಿತ್ತು.

ಒಂದು ರಾತ್ರಿ, ಬ್ರಾಹ್ಮಣನಿಗೆ ಸೊಸೆ ಕೋಣೆಯಿಂದ ಮಾತು ಕೇಳಿಸಿತು.  ಅವನು ಆ ಕಡೆ ಗಮನ ಇಟ್ಟ.  ಹಾವು ಮನುಷ್ಯ ಆಗೋದನ್ನ ನೋಡಿದ.  ಅದು ಆಗ್ತಿದ್ದ ಹಾಗೇ, ಅವನು ಕೋಣೆ ಒಳಗೆ ಹೋಗಿ, ಹಾವಿನ ಚರ್ಮ ತೆಗೆದು ಬೆಂಕೀನಲ್ಲಿ ಎಸೆದ.  ಆಗ ಯುವಕ ತಂದೆ ಕಾಲಿಗೆ ಬಿದ್ದು, 'ತಂದೆ ನಿನಗೆ ಅನಂತ ನಮಸ್ಕಾರಗಳು.  ಯಾರಾದ್ರೂ ನಾನು ಹೇಳದೇ, ಅವರಾಗಿ ಅವರೇ ನನ್ನ ಹಾವಿನ ದೇಹ ಸುಡುವರೆಗೂ, ನಾನು ಹಾವಾಗಿರಬೇಕು ಅಂತ ಶಾಪ ಇತ್ತು.  ಈವತ್ತು ನೀವು ಆ ಕೆಲಸ ಮಾಡಿದ್ರಿ.  ನನಗೆ ಮುಕ್ತಿ ಸಿಕ್ಕಿತು' ಅಂತ ಹೇಳಿದ.   ಆಮೇಲೆ ಯಾವತ್ತೂ ಯುವಕ ತಿರುಗಿ ಹಾವಾಗಲಿಲ್ಲ.  ಅವನು ಅವನ ಹೆಂಡತಿ ನೂರು ಕಾಲ ಸುಖವಾಗಿ ಇದ್ದರು.

## ಸಂಪನ್ಮೂಲ 3:  ತರಗತಿಗೆ ಮಕ್ಕಳ ಸಾಹಿತ್ಯದ ಆಯ್ಕೆ

ಹಲವಾರು ವಿಷಯಗಳ ಆಸಕ್ತಿ ಹುಟ್ಟಿಸಿ ಒಳ ಸೆಳೆಯುವಂತಹ ವಿಶಾಲ ಹರವಿರುವ ಕಥೆ ಮತ್ತು ಕವನಗಳನ್ನು ಮಕ್ಕಳಿಗೆ ಪರಿಚಯಿಸುವುದು ಬಹಳ ಮುಖ್ಯ.

1. ಪುಸ್ತಕಗಳು ಮತ್ತು ಕವನಗಳು ಮಕ್ಕಳಿಗೆ ಈ ರೀತಿಯ ಸಹಾಯವನ್ನು ಒದಗಿಸುತ್ತವೆ:
   - ಅಕ್ಷರ, ಪರಿಚಿತ ಪದಗಳು ಮತ್ತು ವಾಕ್ಯಾಂಶಗಳನ್ನು ಗುರುತಿಸುವುದು
   - ಚಿತ್ರಗಳನ್ನು ಬಳಸಿಕೊಂಡು ಊಹಿಸುವುದು ಮತ್ತು ಪದಗಳನ್ನು ವ್ಯಾಖ್ಯಾನಿಸುವುದು
   - ಬೇರೆ ಓದಿಗೆ ಅನ್ವಯವಾಗುವ ಪದ ಮತ್ತು ವಾಕ್ಯಗಳ ವಿನ್ಯಾಸವನ್ನು ಕಲಿಯುವುದು
   - ಓದುಗರಾಗಿ ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳುವುದು

   ಸಣ್ಣವಯಸ್ಸಿನ ಮಕ್ಕಳಿಗೆ ಸೂಕ್ತ ಪಠ್ಯವನ್ನು ಆರಿಸಲು ನೀವು ಇವನ್ನು ಪರಿಗಣಿಸಬೇಕು:

   - ಮನೆ ಅಥವಾ ಸಮುದಾಯದ ಚಟುವಟಿಕೆಗಳಿಗೆ ಸಂಬಂಧಿಸಿದ ಮಕ್ಕಳಿಗೆ ತಿಳಿದಿರುವ ಸನ್ನಿವೇಶಗಳು ಇರುವುದು
   - ವಿನ್ಯಾಸ ಮತ್ತು ಕ್ರಮಬದ್ಧತೆ ಇರುವುದು.  ಉದಾಹರಣೆಗೆ ಸಂಖ್ಯೆಗಳು, ವಾರದ ದಿನಗಳು, ಹವಾಮಾನ ಅಥವಾ ದಿನನಿತ್ಯ ಮಾಡುವ ಕೆಲಸ
   - ಸ್ವಲ್ಪ ವ್ಯತ್ಯಾಸಗಳೊಂದಿಗೆ ಪದೇ ಪದೇ ಬರುವ ಪದಗಳು, ವಾಕ್ಯಾಂಶಗಳಿರುವುದು
   - ಪದಗಳು ಮತ್ತು ಚಿತ್ರಗಳ ನಡುವೆ ಗಾಢ ಹೊಂದಾಣಿಕೆ
   - ಮಕ್ಕಳು ಮಾತನಾಡಲು ಸಾಧ್ಯವಾಗಿಸುವ, ಆಸಕ್ತಿ ಹುಟ್ಟಿಸುವ ಬಿಂಬಗಳು (ಫೋಟೋ, ಚಿತ್ರ ಅಥವಾ ರೇಖನಗಳು)
   - ಮಕ್ಕಳ ಗಮನ ಹಿಡಿದಿಡಲು ಮತ್ತು ಅವರು ತಾವೇ ಓದಿ ಸಫಲರಾಗಲು, ಪಠ್ಯ ಕಡಿಮೆ ಇರಬೇಕು
2. ದೊಡ್ಡ ವಯಸ್ಸಿನ ಮಕ್ಕಳಿಗೆ ಪುಸ್ತಕಗಳು ಮತ್ತು ಕವನಗಳು ಈ ರೀತಿಯ ಸಹಾಯ ಒದಗಿಸಬೇಕು:
   - ಉತ್ಕೃಷ್ಟ ಮಟ್ಟದ ಪದ ಮತ್ತು ವಾಕ್ಯಾಂಶಗಳನ್ನು ಬಳಸಲು ಕಲಿಸಬೇಕು
   - ಕಥೆ ಮತ್ತು ಓದಿಗಿರುವ ಸಾಮರ್ಥ್ಯವನ್ನು ಅರ್ಥೈಸಿಕೊಳ್ಳಬೇಕು

- ಚರಿತ್ರೆ ಮತ್ತು ಪರಂಪರೆಯನ್ನು ತಿಳಿಯಬೇಕು
- ಸಮಸ್ಯೆಗಳು ಮತ್ತು ದ್ವಂದ್ವಗಳನ್ನು ಅರಿತುಕೊಳ್ಳಬೇಕು

ದೊಡ್ಡ ಮಕ್ಕಳಿಗೆ ಸೂಕ್ತ ಪಠ್ಯವನ್ನು ಆಯ್ಕೆ ಮಾಡುವಾಗ ನೀವು ಈ ಅಂಶಗಳ ಕಡೆ ಗಮನ ಹರಿಸಬೇಕು

- ಚೈತನ್ಯ ಉಕ್ಕಿಸುವ ನಿರೂಪಣೆಗಳು ಮತ್ತು ಆಸಕ್ತಿ ಹುಟ್ಟಿಸುವ ಪಾತ್ರಗಳು
- ನಾಟಕೀಯತೆ, ಸಮಸ್ಯೆ ಮತ್ತು ಪರಿಹಾರಗಳು, ಪಯಣಗಳು,ಅಥವಾ ಪರಿವರ್ತನೆಗಳು
- ಹಾಸ್ಯ ಅಥವಾ ಆಸಕ್ತಿದಾಯಕ ಸಂಭಾಷಣೆ
- ಮಕ್ಕಳಿಗೆ ಚಿಂತನಾ ಅವಕಾಶಗಳು
- ಮುಖ್ಯವಾದ ಸಂದೇಶಗಳು

## ಸಂಪನ್ಮೂಲ 4: ಕಥೆ ಹೇಳುವುದು, ಹಾಡುಗಳು, ಪಾತ್ರಾಭಿನಯ ಮತ್ತು ನಾಟಕ

ಕಲಿಕಾ ಅನುಭವದಲ್ಲಿ ಸಕ್ರಿಯವಾಗಿ ತೊಡಗಿಕೊಂಡಾಗಲೇ ಮಕ್ಕಳು ಉತ್ತಮವಾಗಿ ಕಲಿಯುವುದು. ಪರಸ್ಪರ ಒಡನಾಟ ಮತ್ತು ತಮ್ಮ ಐಡಿಯಾಗಳನ್ನು ಹಂಚಿಕೊಳ್ಳುವುದರ ಮೂಲಕ ನಿಮ್ಮ ವಿದ್ಯಾರ್ಥಿಗಳು ತಾವು ಅರ್ಥ ಮಾಡಿಕೊಂಡಿರುವುದನ್ನು ಇನ್ನೂ ಆಳವಾಗಿ ಗ್ರಹಿಸುವ ಸಾಧ್ಯತೆ ಇರುತ್ತದೆ. ಪಠ್ಯಕ್ರಮದ ಹರವಿನುದ್ದಕ್ಕೂ, ಗಣಿತ ಮತ್ತು ವಿಜ್ಞಾನಗಳನ್ನೂ ಒಳಗೊಂಡಂತೆ, ಅನೇಕ ವಿಷಯಗಳಿಗೆ ಕಥೆ ಹೇಳುವುದು, ಹಾಡುಗಳು, ಪಾತ್ರಾಭಿನಯ ಮತ್ತು ನಾಟಕವನ್ನು ಬಳಸಬಹುದು.

**ಕಥೆ ಹೇಳುವುದು**

ಕಥೆಗಳು ಜೀವನವನ್ನು ಅರ್ಥಮಾಡಿಕೊಳ್ಳಲು ನಮಗೆ ಸಹಾಯ ಮಾಡುತ್ತವೆ. ಅನೇಕ ಸಾಂಪ್ರದಾಯಿಕ ಕಥೆಗಳು ಪೀಳಿಗೆಯಿಂದ ಪೀಳಿಗೆಗೆ ವರ್ಗಾವಣೆಯಾಗಿವೆ. ನಾವು ಚಿಕ್ಕವರಾಗಿದ್ದಾಗ ನಮಗೆ ಈ ಕಥೆಗಳನ್ನು ಹೇಳಿ,ಅವುಗಳ ಮೂಲಕ ನಮ್ಮ ಸಮಾಜದ ನಿಯಮ ಮತ್ತು ಮೌಲ್ಯಗಳನ್ನು ತಿಳಿಸಿಕೊಟ್ಟಿದ್ದರು.

ತರಗತಿಯಲ್ಲಿ ಕಥೆಗಳನ್ನು ಪ್ರಭಾವಶಾಲೀ ಮಾಧ್ಯಮವಾಗಿ ಬಳಸಬಹುದು. ಕಥೆಗಳು:

- ಮನೋರಂಜಕವಾಗಿರುತ್ತವೆ, ರೋಚಕವಾಗಿರುತ್ತವೆ ಮತ್ತು ಉದ್ದೀಪಿಸುತ್ತವೆ
- ನಮ್ಮ ದೈನಂದಿನ ಜೀವನದಿಂದ ಕಲ್ಪನಾ ಪ್ರಪಂಚಕ್ಕೆ ಕರೆದೊಯ್ಯುತ್ತವೆ
- ನಮಗೆ ಸವಾಲುಗಳನ್ನೊಡ್ಡುತ್ತವೆ
- ಹೊಸ ಐಡಿಯಾಗಳ ಕುರಿತು ಚಿಂತಿಸಲು ಎಡೆ ಮಾಡಿಕೊಡುತ್ತವೆ
- ನಮ್ಮ ಭಾವನೆಗಳ ಒಳಹೊಕ್ಕು ಪರಿಶೋಧನೆಯಲ್ಲಿ ತೊಡಗಿಸುತ್ತವೆ
- ವಾಸ್ತವತೆಯಿಂದ ಹೊರತಾದ ಸನ್ನಿವೇಶದಲ್ಲಿ, ಸಮಸ್ಯೆಯ ಬಗ್ಗೆ ಕೂಲಂಕುಷವಾಗಿ ಚಿಂತಿಸುವ ಅವಕಾಶವಿರುವುದರಿಂದ, ಅವುಗಳ ಬಗ್ಗೆ ಭಯ ಬೀಳದೇ ಚಿಂತಿಸಲು ಅನುಕೂಲಕರ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಕಥೆ ಹೇಳುವಾಗ ಮಕ್ಕಳ ಕಣ್ಣಲ್ಲಿ ಕಣ್ಣಿಟ್ಟು ನೋಡಿ. ಬೇರೆ ಬೇರೆ ಪಾತ್ರಗಳಿಗೆ, ಆ ಪಾತ್ರಗಳಿಗೆ ತಕ್ಕ ಉಚ್ಚಾರಣೆ, ಧ್ವನಿಯಲ್ಲಿ ಏರಿಳಿತವಿದ್ದರೆ, ಉದಾಹರಣೆಗೆ ಸಂದರ್ಭಾನುಸಾರ ಪಿಸುಗುಟ್ಟಿದರೆ ಅಥವಾ ಜೋರಾಗಿ ಕಿರುಚಿದರೆ ಮಕ್ಕಳು ಸಂತೋಷ ಪಡುತ್ತಾರೆ. ಕಥೆಯಲ್ಲಿ ನಡೆಯುವ ಮುಖ್ಯ ಘಟನೆಗಳನ್ನು ಪುಸ್ತಕದ ಸಹಾಯವಿಲ್ಲದೇ ಮೌಖಿಕವಾಗಿ ನಿಮ್ಮದೇ ವಾಕ್ಯಗಳಲ್ಲಿ ಹೇಳಲು ಅಭ್ಯಾಸ ಮಾಡಿಕೊಳ್ಳಿ.

ಹೇಳುತ್ತಿರುವ ಕಥೆಗೆ ಜೀವ ತುಂಬಲು, ಕಥೆಗೆ ಸಂಬಂಧಿಸಿದ ಕೆಲವು ವಸ್ತು ಅಥವಾ ವಸ್ತ್ರಗಳನ್ನು ಬಳಸಬಹುದು. ಕಥೆಯನ್ನು ಪರಿಚಯಿಸುವಾಗ ಅದರ ಉದ್ದೇಶ ವಿವರಿಸಿ ಮತ್ತು ಅವರು ಇದರಿಂದ ಏನನ್ನು ಕಲಿಯಬಹುದು ಎಂಬುದರ ಬಗ್ಗೆ ಮುನ್ಸೂಚನೆ ಕೊಟ್ಟಿರಿ. ಕಥೆಯಲ್ಲಿ ಬರುವ ಕೆಲವು ಮುಖ್ಯ ಪದಗಳು ಅಥವಾ ಕಥೆಗೆ ಆಧಾರವಾದ ಪರಿಕಲ್ಪನೆಯ ಬಗ್ಗೆ ತಿಳಿಸಿರಿ. ಸಾಂಪ್ರದಾಯಿಕ

ಕಥೆ ಹೇಳುವವರನ್ನು ಶಾಲೆಗೆ ಕರೆಸಬಹುದು ಆದರೆ ಕಲಿಯಬೇಕಾದ ಅಂಶಗಳ ಬಗ್ಗೆ ಕಥೆ ಹೇಳುವವರಿಗೆ ಮತ್ತು ಮಕ್ಕಳಿಗೆ ಸ್ಪಷ್ಟತೆ ಇರಬೇಕು.

ಕಥೆ ಹೇಳುವ ಕ್ರಿಯೆ ಕೇಳಿಸಿಕೊಳ್ಳುವುದಷ್ಟಕ್ಕೇ ಸೀಮಿತಗೊಳ್ಳದೆ, ಇತರ ಅನೇಕ ಚಟುವಟಿಕೆಗಳನ್ನು ಹುಟ್ಟುಹಾಕಬಲ್ಲದು. ಮಕ್ಕಳು ಕಥೆಯಲ್ಲಿ ಕೇಳಿಸಿಕೊಂಡ ಬಣ್ಣಗಳನ್ನೆಲ್ಲಾ ಪಟ್ಟಿ ಮಾಡಬಹುದು, ಚಿತ್ರ ಬರೆಯಬಹುದು, ಕಥೆಯ ಮುಖ್ಯ ಸಂಗತಿಗಳನ್ನು ನೆನಪಿಸಿಕೊಳ್ಳಬಹುದು ಅಥವಾ ಅಂತ್ಯವನ್ನು ಬದಲಾಯಿಸಬಹುದು. ತರಗತಿಯನ್ನು ಸಣ್ಣ ಗುಂಪುಗಳನ್ನಾಗಿ ಮಾಡಿ, ಚಿತ್ರ ಅಥವಾ ಕಥೆಗೆ ಸಂಬಂಧಿಸಿದ ರಂಗ ಪರಿಕರಗಳನ್ನು ಕೊಟ್ಟು ಇನ್ನೊಂದು ಬೇರೆಯಾದ ದೃಷ್ಟಿಕೋನದಿಂದ ಕಥೆ ಹೇಳಲು ಅವಕಾಶ ನೀಡಬಹುದು. ಕಥೆಯನ್ನು ವಿಶ್ಲೇಷಿಸಿ ಮಕ್ಕಳು ಕಲ್ಪನಾಂಶಗಳು ಯಾವುವು, ವಾಸ್ತವಾಂಶಗಳು ಯಾವುವು ಎಂದು ಗುರುತಿಸಬಹುದು, ಕಥೆಯಲ್ಲಿ ಬರುವ ವಿದ್ಯಮಾನಗಳ ವೈಜ್ಞಾನಿಕ ವಿವರಣೆಗಳನ್ನು ಚರ್ಚಿಸಲು ಹೇಳಬಹುದು ಅಥವಾ ಗಣಿತದ ಸಮಸ್ಯೆಗಳನ್ನು ಬಿಡಿಸಲು ಹೇಳಬಹುದು.

ಮಕ್ಕಳು ಸ್ವತಃ ತಾವೇ ಕಥೆ ಹೆಣೆಯಲು ಹೇಳುವುದು ಬಹಳ ಪ್ರಭಾವಶಾಲೀ ತಂತ್ರ. ನೀವು ಅವರಿಗೆ ಕಥೆಯ ಸ್ವರೂಪ, ವಿಷಯ ಮತ್ತು ಭಾಷೆಯ ಚೌಕಟ್ಟು ನೀಡಿದರೆ, ಮಕ್ಕಳು ತಮ್ಮ ಕಥೆಯನ್ನು ತಾವೇ ಹೇಳಬಹುದು. ಅಷ್ಟೇ ಏಕೆ,ಗಣಿತ ಮತ್ತು ವಿಜ್ಞಾನದ ಕಠಿಣ ಐಡಿಯಾಗಳನ್ನು ಸಹ ಕಥಾರೂಪದಲ್ಲಿ ಹೇಳುವರು. ಒಟ್ಟಾರೆ ಅವರು, ಐಡಿಯಾಗಳೊಡನೆ ಚೆಲ್ಲಾಡಿ, ಅರ್ಥಗಳನ್ನು ಪರಿಶೋಧಿಸಿ, ಅಮೂರ್ತ ಕಲ್ಪನೆಗಳನ್ನು ಅರ್ಥೈಸಿಕೊಳ್ಳಲು ಅವರ ಕಥೆಗಳ ರೂಪಕಗಳನ್ನು ಬಳಸುವರು.

**ಹಾಡುಗಳು**

ತರಗತಿಯಲ್ಲಿ ಹಾಡು ಮತ್ತು ಸಂಗೀತವನ್ನು ಬಳಸುವುದರಿಂದ ಹೆಚ್ಚು ವಿದ್ಯಾರ್ಥಿಗಳು ಕೊಡುಗೆ ನೀಡಲು, ಯಶಸ್ವಿಯಾಗಲು ಮತ್ತು ಚನ್ನಾಗಿ ಕಲಿಯಲು ದಾರಿ ಮಾಡಿಕೊಡಬಹುದು. ಒಟ್ಟಿಗೆ ಹಾಡುವುದು ಎಲ್ಲರನ್ನೂ ಒಗ್ಗೂಡಿಸುತ್ತದೆ ಮತ್ತು ಪ್ರತಿಯೊಬ್ಬರಿಗೂ ತಾವು ಆ ಚಟುವಟಿಕೆಯ ಭಾಗ ಎನಿಸುತ್ತದೆ. ಏಕೆಂದರೆ ಇಲ್ಲಿ ವೈಯಕ್ತಿಕ ಕಾರ್ಯನಿರ್ವಹಣೆ ಕೇಂದ್ರದಲ್ಲಿರುವುದಿಲ್ಲ. ಹಾಡಿನಲ್ಲಿರುವ ಪ್ರಾಸ ಮತ್ತು ಲಯ ನೆನಪಿನಲ್ಲಿ ಉಳಿಯುತ್ತದೆ ಹಾಗೂ ಭಾಷೆ ಮತ್ತು ಮಾತಿನ ಬೆಳವಣಿಗೆಗೆ ಸಹಾಯಕಾರಿಯಾಗಿರುತ್ತದೆ.

ನೀವೇ ಬಹುಶಃ ಒಳ್ಳೆಯ ಹಾಡುಗಾರರಲ್ಲದಿರಬಹುದು, ಆದರೆ ತರಗತಿಯಲ್ಲಂತೂ ನಿಮ್ಮ ಸಹಾಯಕ್ಕೆ ಒಳ್ಳೆಯ ಹಾಡುಗಾರರು ಸಿಕ್ಕೇ ಸಿಗುತ್ತಾರೆ. ನೀವು ಚಲನೆ ಮತ್ತು ಹಾವಭಾವಗಳನ್ನು ಬಳಸಿ ಹಾಡನ್ನು ಜೀವಂತಗೊಳಿಸಬಹುದು ಮತ್ತು ಅದರ ಅರ್ಥವನ್ನು ತಿಳಿಸಬಹುದು. ನಿಮಗೆ ತಿಳಿದಿರುವ ಹಾಡುಗಳ ಪದಗಳನ್ನು ನಿಮ್ಮ ಉದ್ದೇಶಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಂಡು, ಬಳಸಬಹುದು. ಮಾಹಿತಿಯನ್ನು ನೆನಪಿನಲ್ಲಿಟ್ಟುಕೊಳ್ಳಲು ಹಾಡುಗಳು ಬಹಳ ಉಪಯುಕ್ತವಾಗುತ್ತವೆ. ಸೂತ್ರಗಳು ಮತ್ತು ಪಟ್ಟಿಗಳನ್ನು ಹಾಡು ಅಥವಾ ಪದ್ಯಗಳನ್ನಾಗಿ ಮಾಡಬಹುದು. ಪುನರಾವರ್ತನೆಗಾಗಿ ನಿಮ್ಮ ಮಕ್ಕಳೇ ಹೊಸ ಹೊಸ ಹಾಡುಗಳನ್ನು ಅಥವಾ ಮಂತ್ರಗಳನ್ನು ಖಂಡಿತವಾಗಿಯೂ ಸೃಷ್ಟಿಸಬಲ್ಲರು.

ಪಾತ್ರಾಭಿನಯ

ಮಕ್ಕಳಿಗೆ ಅಭಿನಯಿಸಲು ಅಥವಾ ನಾಟಕವಾಡಲು ಒಂದು ಪಾತ್ರವಿದ್ದಾಗ, ಅದು ಪಾತ್ರಾಭಿನಯವಾಗುತ್ತದೆ. ಒಂದು ಸಣ್ಣ ಸನ್ನಿವೇಶದಲ್ಲಿ, ಅವರ ಪಾತ್ರದ ಉದ್ದೇಶಗಳು ಮತ್ತು ಗುಣಲಕ್ಷಣಗಳಿಗೆ ಅನುಗುಣವಾಗಿ ಅವರು ಮಾತನಾಡುತ್ತಾರೆ, ಅಭಿನಯಿಸುತ್ತಾರೆ. ಶಿಕ್ಷಕರು ಪಾತ್ರ ವಹಿಸಲು ಅಗತ್ಯವಾದ ಮಾಹಿತಿಯನ್ನು ಆವಶ್ಯವಾಗಿ ಕೊಡಬೇಕು, ಆದರೆ ಆ ಪಾತ್ರ ಏನು ಹೇಳುತ್ತದೆ ಎನ್ನುವುದನ್ನು ಬಿಟ್ಟುಕೊಡಬಾರದು. ಪಾತ್ರಾಭಿನಯ ಮಾಡುತ್ತಿರುವ ಮಕ್ಕಳು ತಮ್ಮ ಚಿಂತನೆಗಳು ಮತ್ತು ಭಾವನೆಗಳನ್ನು ಸಹಜವಾಗಿ ಹೇಳಲು ಉತ್ತೇಜನವಿರಬೇಕು.

ಪಾತ್ರಾಭಿನಯದಿಂದ ಅನೇಕ ಅನುಕೂಲಗಳಿವೆ. ಏಕೆಂದರೆ ಇದು:

- ಬೇರೆಯವರ ಭಾವನೆಗಳನ್ನು ಅರ್ಥ ಮಾಡಿಕೊಳ್ಳಲು ನೈಜ ಸನ್ನಿವೇಶಗಳಲ್ಲಿ ಹುಡುಕಾಟ ನಡೆಸುತ್ತದೆ

- ನಿರ್ಧಾರಗಳನ್ನು ತೆಗೆದುಕೊಳ್ಳುವ ಕೌಶಲಗಳನ್ನು ಬೆಳೆಸುತ್ತದೆ
- ಮಕ್ಕಳನ್ನು ಕಲಿಕೆಯಲ್ಲಿ ತೊಡಗಿಸುತ್ತದೆ ಮತ್ತು ಎಲ್ಲರೂ ತಮ್ಮ ಕೊಡುಗೆಯನ್ನು ನೀಡುವುದಕ್ಕೆ ಅವಕಾಶ ಕಲ್ಪಿಸುತ್ತದೆ
- ಉನ್ನತ ಮಟ್ಟದ ಚಿಂತನೆಯನ್ನು ಪ್ರೋತ್ಸಾಹಿಸುತ್ತದೆ

ಪಾತ್ರಾಭಿನಯದಿಂದ, ಸಣ್ಣ ವಯಸ್ಸಿನ ವಿದ್ಯಾರ್ಥಿಗಳು ವೈವಿಧ್ಯಮಯ ಸಾಮಾಜಿಕ ಸನ್ನಿವೇಶಗಳಲ್ಲಿ ಮಾತನಾಡಲು ವಿಶ್ವಾಸ ಮೂಡುತ್ತದೆ. ಉದಾಹರಣೆಗೆ, ಅಂಗಡಿಯಲ್ಲಿ ಸಾಮಾನು ಕೊಳ್ಳುತ್ತಿರುವಂತೆ, ಪ್ರವಾಸಿಗರಿಗೆ ಊರಿನಲ್ಲಿರುವ ಮುಖ್ಯ ಪ್ರವಾಸೀ ತಾಣಕ್ಕೆ ದಾರಿ ತೋರಿಸುವಂತೆ ಅಥವಾ ಟಿಕೆಟ್ ಕೊಳ್ಳುವುದನ್ನು ಅಭಿನಯ ಮಾಡಿಸಬಹುದು. ಸರಳವಾದ ಕೆಲವೇ ರಂಗ ಸಜ್ಜಿಕೆ ವಸ್ತುಗಳನ್ನು ಇಟ್ಟು ಸನ್ನಿವೇಶ ಸೃಷ್ಟಿಸಬಹುದು. ಕೆಲವು ಫಲಕಗಳನ್ನು - ದರ್ಶಿನಿ/ಚಹಾ ಅಂಗಡಿ, ಡಾಕ್ಟರ್ ಕ್ಲಿನಿಕ್ ಅಥವಾ ಪಂಚರ್ ಅಂಗಡಿ ಎನ್ನುವ ಫಲಕಗಳನ್ನು ಇಟ್ಟು, 'ಇಲ್ಲಿ ಯಾರು ಕೆಲಸ ಮಾಡುತ್ತಾರೆ', 'ಅವರೇನು ಹೇಳುತ್ತಾರೆ?' ಮತ್ತು 'ನಾವೇನು ಹೇಳುತ್ತೇವೆ?' ಎಂದು ಮಕ್ಕಳನ್ನು ಕೇಳಬಹುದು. ಅವರು ಈ ಪಾತ್ರಗಳಾಗಿ ಸಂಭಾಷಣೆ ನಡೆಸಲು ಅವಕಾಶ ಕೊಟ್ಟು, ಭಾಷಾ ಬಳಕೆಯನ್ನು ಗಮನಿಸಬಹುದು.

ಪಾತ್ರಾಭಿನಯ, ದೊಡ್ಡ ಮಕ್ಕಳಲ್ಲಿ ಜೀವನ ಕೌಶಲಗಳನ್ನು ಬೆಳಸಬಹುದು. ಉದಾಹರಣೆಗೆ, ತರಗತಿಯಲ್ಲಿ ಒಂದು ಘರ್ಷಣೆಯನ್ನು ಬಗೆ ಹರಿಸುತ್ತಿರುವ ಮಾರ್ಗಗಳನ್ನು ಹುಡುಕುತ್ತಿರುವಿರಿ ಎಂದುಕೊಳ್ಳೋಣ. ಆಗ ಶಾಲೆ ಅಥವಾ ಸಮುದಾಯದಲ್ಲಿ ಹಿಂದೆ ನಡೆದ ನೈಜ ಘಟನೆಯ ಮೂಲಕ ವಿವರಿಸುವ ಬದಲು ಇದೇ ರೀತಿ ಇರುವ, ಇವೇ ಸವಾಲುಗಳನ್ನು ತೆರೆದಿಡುವ ಆದರೆ ಇಲ್ಲಿಗೆ ನೇರ ಸಂಬಂಧವಿಲ್ಲದಿರುವ ಸನ್ನಿವೇಶವನ್ನು ಬಳಸುವುದು ಉತ್ತಮ. ಮಕ್ಕಳು ವಹಿಸುವ ಪಾತ್ರಗಳನ್ನು ನೀವೇ ನಿರ್ಧರಿಸಿ ಅಥವಾ ಅವರಿಗೆ ಸ್ವತಃ ಆಯ್ಕೆಯ ಸ್ವಾತಂತ್ರ್ಯ ಕೊಡಿ. ಅವರಿಗೆ ಯೋಜಿಸಲು ಸಮಯ ಕೊಡಿ ಅಥವಾ ತತ್‌ಕ್ಷಣವೇ ಪಾತ್ರಾಭಿನಯ ಮಾಡಲು ಹೇಳಿ. ಪಾತ್ರಾಭಿನಯ ಇಡೀ ತರಗತಿಯಲ್ಲಿ ಪ್ರಸ್ತುತಪಡಿಸಬಹುದು ಅಥವಾ ಯಾವುದೇ ಗುಂಪನ್ನು ನೋಡದೇ, ವಿದ್ಯಾರ್ಥಿಗಳು ಸಣ್ಣ ಗುಂಪುಗಳಲ್ಲಿ ಕೆಲಸ ಮಾಡಬಹುದು. ಇಲ್ಲಿನ ಮುಖ್ಯ ಉದ್ದೇಶ ಪಾತ್ರಾಭಿನಯದ ಅನುಭವ ಮತ್ತು ಒಳಗಿದ್ದದ್ದು ಪ್ರಕಟವಾಗುವುದೇ ಹೊರತು ಉನ್ನತ ಮಟ್ಟದ ಅಭಿನಯದ ಪ್ರದರ್ಶನ ಅಥವಾ ಬಾಲಿವುಡ್ ನಟನಾ ಪ್ರಶಸ್ತಿಯಲ್ಲ.

ವಿಜ್ಞಾನ ಮತ್ತು ಗಣಿತದಲ್ಲೂ ಪಾತ್ರಾಭಿನಯವನ್ನು ಬಳಸುವ ಸಾಧ್ಯತೆಗಳಿವೆ. ಕಣಗಳು ಪರಸ್ಪರ ಸಂಧಿಸಿದಾಗ ಅಥವಾ ಬೆಳಕು ಅಥವಾ ಶಾಖದ ಪ್ರಭಾವದಿಂದ ಉಂಟಾಗುವ ಬದಲಾವಣೆಗಳನ್ನು ತೋರ್ಪಡಿಸುವ ಗುಣಲಕ್ಷಣಗಳನ್ನು ಬಳಸಿಕೊಂಡು, ವಿದ್ಯಾರ್ಥಿಗಳು ಪರಮಾಣುಗಳು ವರ್ತಿಸುವ ರೀತಿಯನ್ನು ಅನುಕರಿಸಿ ಅಭಿನಯಿಸಬಹುದು. ಗಣಿತದಲ್ಲಿ ವಿದ್ಯಾರ್ಥಿಗಳು ಕೋನ ಮತ್ತು ಆಕೃತಿಗಳ ಪಾತ್ರಾಭಿನಯ ಮಾಡಿ ಅವುಗಳ ಲಕ್ಷಣ ಮತ್ತು ವಿವಿಧ ಸೇರುವಿಕೆ (combinations) ಗಳನ್ನು ಕಂಡುಕೊಳ್ಳಬಹುದು.

## ನಾಟಕ

ನಾಟಕ, ಬಹಳಷ್ಟು ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದಕ್ಕೆ ಬಳಸಬಹುದಾದ ಉತ್ತಮ ಮಾರ್ಗೋಪಾಯ. ನಾಟಕವು ಅನೇಕ ಕೌಶಲಗಳು ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ನಿಮ್ಮ ವಿದ್ಯಾರ್ಥಿಗಳು ಒಂದು ವಿಷಯವನ್ನು ಅರ್ಥೈಸಿಕೊಂಡಿರುವುದನ್ನು ಮೌಲ್ಯಾಂಕನ ಮಾಡಲು ನಾಟಕವನ್ನು ಬಳಸಬಹುದು. ಮಿದುಳು ಕೆಲಸ ಮಾಡುವ ರೀತಿಯನ್ನು ತಾವು ಅರ್ಥೈಸಿಕೊಂಡಿರುವುದನ್ನು ವಿದ್ಯಾರ್ಥಿಗಳು ಈ ರೀತಿ ತೋರಿಸಬಹುದು - ಆಟದ ಫೋನ್ ಬಳಸಿಕೊಂಡು, ಒಂದು ನಾಟಕದ ಮೂಲಕ ಮಿದುಳಿನಿಂದ ಕಿವಿ, ಕಣ್ಣು, ಮೂಗು, ಕೈ ಮತ್ತು ಬಾಯಿಗೆ ಸಂದೇಶಗಳು ತಲುಪಿ ಮತ್ತೆ ವಾಪಸ್ ರವಾನೆಯಾಗುವುದನ್ನು ತೋರಿಸಬಹುದು. ಅಥವಾ ಸಂಖ್ಯೆಗಳನ್ನು ಕಳೆಯುವುದನ್ನು ಮರೆಯುವುದರಿಂದ ಆಗುವ ಆಭಾಸಗಳನ್ನು ತೋರಿಸುವ ಸಣ್ಣ ಮೋಜಿನ ನಾಟಕವೊಂದರಿಂದ ಎಳೆ ಮನಸ್ಸುಗಳಲ್ಲಿ ಸರಿಯಾದ ಕ್ರಮವನ್ನು ನಾಟಿಸುವ ಸಾಧ್ಯತೆ ಇರಬಹುದು.

ಅನೇಕ ಸಲ, ನಾಟಕ ಇಡೀ ತರಗತಿ, ಪೋಷಕರು ಅಥವಾ ಸಮುದಾಯಕ್ಕೆ ಪ್ರದರ್ಶನವಾಗಿ ಬೆಳೆಯುತ್ತದೆ. ಈ ಗುರಿ ಮಕ್ಕಳಿಗೆ ಪ್ರೇರೇಪಣೆಯಾಗಿ, ಅವರು ಕಾರ್ಯ ನಿರತರಾಗಿರುವಂತೆ ಮಾಡುತ್ತದೆ. ನಾಟಕದ ಸೃಷ್ಟಿ ಕಾರ್ಯದಲ್ಲಿ ಇಡೀ ತರಗತಿ

ತೊಡಗಿಕೊಳ್ಳಬೇಕು. ಮಕ್ಕಳ ಆತ್ಮವಿಶ್ವಾಸದಲ್ಲಿ ಇರುವ ಭಿನ್ನತೆಯನ್ನು ಗುರುತಿಸುವುದು ಮುಖ್ಯ. ಎಲ್ಲ ಮಕ್ಕಳೂ ನಟ/ನಟಿಯರಾಗಬೇಕಿಲ್ಲ. ಮಕ್ಕಳು ತಮ್ಮ ತಮ್ಮ ಪ್ರತಿಭೆ ಮತ್ತು ವ್ಯಕ್ತಿತ್ವಕ್ಕೆ ಅನುಗುಣವಾಗಿ ವಿವಿಧ ರೀತಿಯ ಕೊಡುಗೆಗಳನ್ನು ನೀಡಬಹುದು (ಉದಾಹರಣೆಗೆ: ಸಂಘಟನೆ, ವೇಷ ಭೂಷಣ, ರಂಗಸಜ್ಜಿಕೆ, ರಂಗ ಸಹಾಯ).

ನಿಮ್ಮ ವಿದ್ಯಾರ್ಥಿಗಳ ಕಲಿಕೆಯಲ್ಲಿ ನಾಟಕವನ್ನು ಏಕೆ ಬಳಸುತ್ತಿದ್ದೀರಿ ಎನ್ನುವುದರ ಬಗ್ಗೆ ಚಿಂತನೆ ನಡೆಸುವುದು ಬಹಳ ಮುಖ್ಯ: ಭಾಷೆಯನ್ನು ಕಲಿಸಲೋ (ಉದಾ: ಪ್ರಶ್ನೆ ಕೇಳುವುದು ಮತ್ತು ಉತ್ತರಿಸುವುದು), ವಿಷಯದ ಕಲಿಕೆಗೋ (ಉದಾ: ಗಣಿಗಾರಿಕೆಯಿಂದಾಗುವ ಪಾರಿಸಾರಿಕ ಪರಿಣಾಮಗಳು) ಅಥವಾ ನಿರ್ದಿಷ್ಟ ಕೌಶಲಗಳನ್ನು ಬೆಳೆಸುವುದಕ್ಕೋ (ಉದಾ: ಜೊತೆಗೂಡಿ ತಂಡದಲ್ಲಿ ಕೆಲಸ ಮಾಡುವುದು)? ಪ್ರದರ್ಶನವನ್ನು ಗುರಿಯಾಗಿಸಿಕೊಂಡು, ನಾಟಕದಿಂದಾಗಬಹುದಾದ ಕಲಿಕೆ ಹಿಂದೆ ಸರಿಯದಂತೆ ನೋಡಿಕೊಳ್ಳುವ ಜಾಗರೂಕತೆ ಇರಬೇಕು.

## ಹೆಚ್ಚುವರಿ ಸಂಪನ್ಮೂಲಗಳು

- There are a number of fiction and non-fiction books for children in the NCERT catalogue, in both Hindi and English, which may be used in activities similar to those described in this unit: http://www.ncert.nic.in/publication/children_books/children_books.html
- A list of children's literature recommended by the Department of Elementary Education in both Hindi and English can be found here on their website: http://www.ncert.nic.in/departments/nie/dee/publication/Print_Material.html
- Other organisations producing literature for children include Room to Read India (http://www.roomtoread.org/Page.aspx?pid=304) and Pratham Books (http://www.prathamusa.org/programs/library, http://blog.prathambooks.org/2010/10/childrens-literature-from-india-and.html)
- Traditional Indian stories: http://www.indiaparenting.com/stories/index.shtml#77
- Indian fables: http://excellup.com/kidsImage/panchtantra/panchatantra_list.aspx

## ಪರಾಮರ್ಶನ ಗ್ರಂಥಸೂಚಿ


Chambers, A. (2011) *Tell Me: Children, Reading and Talk with The Reading Environment*. Stroud: Thimble Press.

Cremin, T., Mottram, M., Collins, F., Powell, S. and Safford, K. (2009) *Teachers as Readers: Building Communities of Readers 2007-08 Executive Summary*. The United Kingdom Literacy Association. Available from: http://www.ukla.org/downloads/teachers_as_readers.pdf (accessed 18 November 2014).

Dasgupta A. (1995) *Telling Tales: Children's Literature in India*. London: Taylor and Francis.

Duursma, E., Augustyn, M., Zuckerman, B. (2008) 'Reading aloud to children: the evidence', *Archives of Disease in Childhood*, vol. 93, no. 7, pp. 554–7. Available from: http://www.reachoutandread.org/FileRepository/ReadingAloudtoChildren_ADC_July2008.pdf (accessed 18 November 2014).

Gamble, N. (2013) *Exploring Children's Literature: Reading with Pleasure and Purpose*. London: Sage Publications.

Phinn, G. (2009) *Teaching Poetry in the Primary Classroom*. Cambridge: Cambridge University Press.


### Acknowledgements

Except for third party materials and otherwise stated below, this content is made available under a Creative Commons Attribution-Share Alike licence (http://creativecommons.org/licenses/by-sa/3.0/). The material

acknowledged below is Proprietary and used under licence for this project, and not subject to the Creative Commons Licence. This means that this material may only be used unadapted within the TESS-India project and not in any subsequent OER versions. This includes the use of the TESS-India, OU and UKAID logos.

Grateful acknowledgement is made to the following sources for permission to reproduce the material in this unit:

Resource 1: *Annual Haircut Day*, written by Noni, illustrations by Angie and Upesh, © Pratham Books. Made available under http://creativecommons.org/licenses/by-nc-sa/2.5/in/.

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.

Video (including video stills): thanks are extended to the teacher educators, headteachers, teachers and students across India who worked with The Open University in the productions.